ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್–15/ಡಿ01 / 2021–22

ದಿನಾಂಕ: 21.12.2021

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 17.12.2021 ರಂದು ಜರುಗಿದ ಸಿಂಡಿಕೇಟ್ 15 ನೇ ಸಾಮಾನ್ಯ ಸಭೆಯ ನಡವಳಿಗಳು.**

***

ದಿನಾಂಕ: **17.12.2021** ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟ್ 15 ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU**
**CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್–15/ಸಾಮಾನ್ಯಸಭೆ/301 /2021–22 ದಿನಾಂಕ: 21.12.2021.

ದಿನಾಂಕ 17.12.2021 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 15ನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ: ಲಿಂಗರಾಜ ಗಾಂಧಿ,<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ.ವಿ.ಆರ್. ದೇವರಾಜ್, | ಸದಸ್ಯರು |
| 3. | ಶ್ರೀ.ಎಂ.ವಿ. ರಂಗಪ್ಪ, | ಸದಸ್ಯರು |
| 4. | ಶ್ರೀ.ಸಮರ್ಥ ಮುನಿರಾಜು, | ಸದಸ್ಯರು |
| 5. | ಡಾ: ಶಿಂಟಿ ಆಂಟನಿ, | ಸದಸ್ಯರು |
| 6. | ಶ್ರೀ ಕೆ. ಶಿವಣ್ಣ, | ಸದಸ್ಯರು |
| 7. | ಡಾ: ಗುರುನಾಥರಾವ್ ವೈದ್ಯ, | ಸದಸ್ಯರು |
| 8. | ಡಾ: ಅನೇಸಿಯಾ, | ಸದಸ್ಯರು |
| 9. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 10. | ಶ್ರೀ ಹೆಚ್.ಎನ್. ಹರಿಪ್ರಸಾದ, | ಸದಸ್ಯರು |
| 11. | ಶ್ರೀಮತಿ ಜ್ಯೋತಿ ವಿಜಯ್, | ಸದಸ್ಯರು |
| 12. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ, | ಸದಸ್ಯರು |
| 13. | ಡಾ: ಆರ್.ಕೆ. ಚಂದ್ರನಾಥ್, | ಸದಸ್ಯರು |
| 14. | ಶ್ರೀ ಥಾಮಸ್ ನೀಲಿಯಾರ, | ಸದಸ್ಯರು |
| 15. | ಡಾ: ವಿ. ಗಾಯತ್ರಿ, | ಸದಸ್ಯರು |
| 16. | ಪ್ರೊ.ಬಿ. ರಮೇಶ್,<br>ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 17. | ಶ್ರೀ. ಸಿ.ಎನ್. ಶ್ರೀಧರ,<br>ಕುಲಸಚಿವರು | ಸದಸ್ಯ<br>ಕಾರ್ಯದರ್ಶಿಗಳು |

ಕುಲಸಚಿವರು ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭಾಧ್ಯಕ್ಷರಿಗೆ ಸಭೆ ನಡೆಸಿ ಕೊಡಲು ಅನುಮತಿ ಕೋರಿದರು. ಮಾನ್ಯ ಕುಲಪತಿಗಳು ಹೊಸದಾಗಿ ನಾಮನಿರ್ದೇಶನಗೊಂಡ ನಾಲ್ಕು ಪ್ರಾಂಶುಪಾಲರುಗಳಾದ ಡಾ: ಶಿಂಟಿ ಆಂಟನಿ, ಶ್ರೀ ಕೆ. ಶಿವಣ್ಣ, ಡಾ: ಗುರುನಾಥರಾವ್ ವೈದ್ಯ ಹಾಗೂ ಡಾ: ಅನೇಸಿಯಾ, ಮತ್ತು ಘನತೆವೆತ್ತ ಕುಲಾಧಿಪತಿಗಳಿಂದ ನಾಮನಿರ್ದೇಶಿತರಾದ ಶ್ರೀ.ಎಂ.ವಿ. ರಂಗಪ್ಪ ಹಾಗೂ ಶ್ರೀ. ಸಮರ್ಥ ಮುನಿರಾಜು ರವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು, ಹಾಗೆಯೇ ಸಿಂಡಿಕೇಟ್ ಸದಸ್ಯತ್ವದ ಅವಧಿ ಪೂರೈಸಿದ ಪ್ರೊ. ಕೆ. ರಮೇಶ್, ಡಾ. ಲಿಡಿಯಾ ಪಿ ಸ್ಯಾಮುಯೆಲ್, ಡಾ. ಪಿ. ವಿ. ಪದ್ಮಜಾ, ಪ್ರೊ. ಎಂ. ಚಿಕ್ಕಮುನಿಯಪ್ಪ, ಡಾ. ಹೆಚ್. ಟಿ. ಅರವಿಂದ್ ಮತ್ತು ಶ್ರೀ ಹೆಚ್.ಆರ್ ಸತೀಶ್ ಅವರ ಸೇವೆಯನ್ನು ಸ್ಮರಿಸಿ ದಾಖಲಿಸಿದರು. ನಂತರ ಕುಲಸಚಿವರು ಕಾರ್ಯಸೂಚಿಯ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

ವಿಷಯ ಸಂಖ್ಯೆ 1: ದಿನಾಂಕ: 30.09.2021 ರಂದು ಜರುಗಿದ ಸಿಂಡಿಕೇಟ್ 14ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಧೃಢೀಕರಣ ಮತ್ತು ಅನುಪಾಲನಾ ವರದಿ

ನಿರ್ಣಯ:

ದಿನಾಂಕ ದಿನಾಂಕ: 30.09.2021 ರಂದು ಜರುಗಿದ ಸಿಂಡಿಕೇಟ್ 14ನೇ ಸಾಮಾನ್ಯ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ 2: **Entering into a Memorandum of Understanding (MOU) with Japan International Co-operation Agency (JICA) Govt. of Japan for providing a Japanese Language teacher at Center for Global Languages Bengaluru City University**

***REFERENCE NOTE***:

Under the New Education Policy-2020, there is an emphasis to go in for collaborations for research and expansion of higher education to suit the global human resources requirements. The $21^{st}$ century is a knowledge-based century looking for internationalization of education at various levels. In this direction Government of India has initiated by signing an Memorandum of Understanding with Government of Japan, for promotion of Japanese language education in India through various programs /schemes.

The emerging strong trade relationship of India with Japan and other South East Asian Countries gives scope to Indian executives to learn Japanese Language. The Center for Global Languages of the University is offering since almost 3 decades, Japanese language Courses of different levels, such as Certificate, Diploma, Higher Diploma and PG Courses to the Students for advancement in their professional life and enhancement career opportunities. Having a native Japanese teacher will strengthen teaching / learning in environment of the department.

A. ***PROGRAMME / SCHEME***:

1. The scheme is called **Japanese Overseas Cooperation Volunteers Scheme. (JOCV).**
2. In India, this scheme is handled by **Japan International Cooperation Agency, (JICA), New-Delhi,** an office set up by Government of Japan.
3. The scheme involves deputing a native Japanese teacher, at the request of a host education institution, for a period of 1 or 2 years, with a provision of further extension beginning with the Academic Year 2022-23.
4. The scheme involves the following commitment from Government of Japan:
   a) The salary to the native teacher.
   b) The travel expenses to and from Japan and host city and also between host city and New-Delhi. (To visit JICA office).
   c) Health Insurance.

***B. COMMITMENT ON THE PART OF BENGALURU CITY UNIVERSITY***

a) Basic accommodation to the Japanese teacher.

b) Local conveyance for official purpose, if any.

Bengaluru City University would therefore like to utilize this opportunity to request for a native teacher volunteer, under this scheme, for augmentation of Center for Global Languages and promotion of teaching and learning of Japanese language by entering into a Memorandum of Understanding (MoU).

The matter is placed before the Syndicate for its consideration and approval.

ನಿರ್ಣಯ:

**Approved. Copy of the MoU to be circulated.**

**ವಿಷಯ ಸಂಖ್ಯೆ 3:** **Entering into a Memorandum of Understanding (MOU) with the Director of Cultural and Scientific Relations (DRCC) on behalf of Spanish Agency for International Co-operation and Development (AECID) Govt. of Spain for providing assistance of a native Spanish teacher for the Center for Global Languages, Bengaluru City University**

***REFERENCE NOTE***:

Under the New Education Policy-2020, there is an emphasis to go in for collaborations for research and expansion of higher education to suit the global human resources requirements. The 21st century is a knowledge-based century looking for internationalization of education at various levels. The influence of Spanish language is not just limited to Spain and Latin America but is also there across continents, and the knowledge of this language offers attractive study and business destination in Europe and other continents.

***PROGRAMME:***

1) The promotion of Spanish language programme details were brought to our notice by Ms. Surbhi Sharma, Honorary Consul General of Spain, Bangalore. This initial introduction was followed by a visit to BCU by Consul General of Spain, Mumbai, Mr. Naguer.

   The programme is called **Lecturship Programme**

   In India, this programme is handled by: **Embassy of Spain in India, New-Delhi**

2) The above programme involves deputing a native Spanish teacher, at the request of a host education institution, for a period of 1 or 2 years, with a possibility of further extension beginning with Academic year 2022-23.

3) The programme involves the following commitment from Government of Spain:

   a) The salary to the native teacher.
   b) The travel expenses to and fro Spain and host city.
   c) Health Insurance or Similar

***IMPORTANCE OF THIS MOU:***

Relations between India and Spain have been cordial since the establishment of diplomatic relations in 1956. Spain is India's 7th largest trade partner in the European Union. Career Scope & Jobs after learning Spanish in India are plenty. There are more than 250 Spanish companies in India. If you speak Spanish, you can pick several career pathways like teaching, tourism, translation, interpretation, international business, journalism, foreign service, and many more.

Centre for Global Languages, Bengaluru City University, has been teaching Spanish language courses since nearly 2 decades. The response for this language is good and the department is looking at further developing the MA Spanish programme, which is being offered, along with other level courses.

Hence, Bengaluru City University would like to utilize this opportunity to request for a native teacher, under this program, for further promotion and development of Spanish language and culture in the department.

***COMMITMENT OF BENGALURU CITY UNIVERSITY TO THIS SCHEME:***

In case this proposal is accepted, the commitment of BCU would be to provide:

a) Basic accommodation to the Spanish teacher.
b) Local conveyance for official purpose, if any.

The matter is placed before the Syndicate for its consideration and approval.

<u>ನಿರ್ಣಯ:</u>

**Approved. Copy of the MoU to be circulated.**

**ವಿಷಯ ಸಂಖ್ಯೆ 4:** **ಬೆಂಗಳೂರು ನಗರ ವಿಶ್ವವಿದ್ಯಾಲನಿಲಯದ ವ್ಯಾಪ್ತಿಯ ಬಿ.ಎಂ.ಎಸ್ ಮಹಿಳಾ ಕಾಲೇಜಿಗೆ ಹೊಸದಾಗಿ ಸ್ವಾಯತ್ತತೆಯನ್ನು 2021–22 ನೇ ಸಾಲಿನಿಂದ 2030–31 ನೇ ಸಾಲಿನವರೆಗೆ ಹತ್ತು ವರ್ಷಗಳ ಅವಧಿಗೆ (10 ವರ್ಷಗಳ) ವರೆಗೆ ಮಂಜೂರು ಮಾಡಲು ಅನುಮೋದಿಸುವ ಬಗ್ಗೆ.**

ಉಲ್ಲೇಖ: 1. ದಿನಾಂಕ 30.11.2020 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿ
2. ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗದ ಪತ್ರ ಸಂಖ್ಯೆ.ಎಫ್.22–1/20/2017(ಎಸಿ) ದಿನಾಂಕ 07.09.2021.
3. ಸರ್ಕಾರದ ಪತ್ರ ಸಂಖ್ಯೆ.ಇಡಿ 319 ಯುಬಿವಿ 2021 ದಿನಾಂಕ 28.10.2021

***ಪರಮಾರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಬಿ.ಎಮ್.ಎಸ್ ಮಹಿಳಾ ಕಾಲೇಜು ಸ್ವಾಯತ್ತತೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಉಲ್ಲೇಖ (1) ರಲ್ಲಿ ಸಿಂಡಿಕೇಟ್ ಸಭೆ ಪರಿಗಣಿಸಿ, ಮಹಾವಿದ್ಯಾಲಯಗಳ ಸ್ವಾಯತ್ತತೆ ಪಡೆಯಲು (ಅಟಾನಮಸ್) ನಿರಪೇಕ್ಷಣಾ ಪತ್ರ ನೀಡಲು ತೀರ್ಮಾನಿಸಿದ ಪ್ರಕಾರ ಕಾಲೇಜಿಗೆ ನಿರಪೇಕ್ಷಣಾ ಪತ್ರ ನೀಡಲಾಗಿದೆ.

ಸದರಿ ಕಾಲೇಜು ಸರ್ಕಾರದಿಂದ ನಿರಪೇಕ್ಷಣಾ ಪತ್ರ ಪಡೆದು ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಯು.ಜಿ.ಸಿ. ಪರಿಗಣಿಸಿ ಉಲ್ಲೇಖ (2) ರಲ್ಲಿ ನಮೂದಿಸಿದ ಪತ್ರದಲ್ಲಿ ಬಿ.ಎಮ್.ಎಸ್. ಮಹಿಳಾ ಕಾಲೇಜಿಗೆ 2021–22 ರಿಂದ 2030–31 ನೇ ಸಾಲಿನವರೆಗೆ 10 ವರ್ಷಗಳ ಅವಧಿಗೆ ಸ್ವಾಯತ್ತತೆ (ಅಟಾನಮಸ್) ದರ್ಜೆಯನ್ನು ನೀಡಿರುವುದನ್ನು ತಿಳಿಸಿರುತ್ತಾರೆ.

ಸದರಿ ಕಾಲೇಜು, ಯು.ಜಿ.ಸಿ ಆಯೋಗದ ಸ್ವಾಯತ್ತ ಕಾಲೇಜುಗಳಿಗೆ ಸಂಬಂಧಿಸಿದ ನಿಭಂದನೆಗಳನ್ನು ಪಾಲಿಸಬೇಕೆಂಬ ಷರತ್ತು ವಿಧಿಸಿರುತ್ತಾರೆ. ಇದರೊಂದಿಗೆ ವಿಶ್ವವಿದ್ಯಾನಿಲಯ ಅನುಸರಿಸುತ್ತಿರುವ ಬೆಂಗಳೂರು ವಿಶ್ವವಿದ್ಯಾನಿಲಯದ ಸ್ವಾಯತ್ತ ಕಾಲೇಜುಗಳ ಪರಿನಿಯಮದ ನಿಬಂಧನೆಗಳನ್ನು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ ಹಾಗೂ ಕಾಲಕಾಲಕ್ಕೆ ಸರ್ಕಾರ/ವಿಶ್ವವಿದ್ಯಾನಿಲಯ ನೀಡುವ ಆದೇಶ/ಸೂಚನೆಗಳನ್ನು ಪಾಲಿಸಬೇಕೆಂಬ ಷರತ್ತು ವಿಧಿಸಿ, ಬಿ.ಎಮ್.ಎಸ್. ಮಹಿಳಾ ಕಾಲೇಜಿಗೆ 2021–22 ರಿಂದ 2030–31 ರವರೆಗೆ (10 ವರ್ಷಗಳ) ಅವಧಿಗೆ ಸ್ವಾಯತ್ತ ದರ್ಜೆ ನೀಡುವ ವಿಷಯವನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

ಕೆಲವು ಸದಸ್ಯರು ವಿಶ್ವವಿದ್ಯಾಲಯ ಧನಸಹಾಯ ಆಯೋಗ (UGC) ನಿಯಮಾವಳಿಗಳು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ ಉಪಬಂಧಗಳಿಗೆ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಸ್ವಾಯತ್ತ ಮಹಾವಿದ್ಯಾಲಯಗಳ ಪರಿನಿಯಮಗಳನ್ನು ಪರಿಗಣಿಸಿ ಅವುಗಳಲ್ಲಿ ಇರುವ ಸಾಮ್ಯತೆ ಮತ್ತು ವೈರುಧ್ಯಗಳ ಕುರಿತು ಪರಿಶೀಲಿಸಬೇಕೆಂದು ಸಭೆ ಅಭಿಪ್ರಾಯಪಟ್ಟಿತು. ಈ ಕುರಿತು ಸ್ವಾಯತ್ತ ಮಹಾವಿದ್ಯಾಲಯಗಳ ಪ್ರಾಂಶುಪಾಲರ ಸಭೆ ಕರೆದು ವಿಷಯಗಳನ್ನು ಸ್ಪಷ್ಟೀಕರಿಸಬೇಕೆಂದು ಹಾಗೂ ಸರ್ಕಾರದ ಆದೇಶ/ನೀತಿ/ನಿರ್ಧಾರಗಳನ್ನು ಮತ್ತು ವಿಶ್ವವಿದ್ಯಾನಿಲಯದ ನಿಯಮಗಳನ್ನು ಪಾಲಿಸುವ ಕುರಿತು ಅರಿವು ಮೂಡಿಸಬೇಕೆಂದು ಸದಸ್ಯರು ಅಭಿಪ್ರಾಯ ನೀಡಿದರು.

<u>ನಿರ್ಣಯ:</u>

**ಪ್ರಸ್ತಾವನೆಯ ನಿಬಂಧನೆಗಳಿಗೆ ಒಳಪಟ್ಟು ಒಪ್ಪಿಗೆ ಸೂಚಿಸಲಾಯಿತು.**

**ಸ್ವಾಯತ್ತ ಮಹಾವಿದ್ಯಾಲಯಗಳ ವಾರ್ಷಿಕ ಪರಿಶೀಲನೆ ಸಂಬಂಧದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸ್ವಾಯತ್ತ ಮಹಾವಿದ್ಯಾಲಯಗಳ ಪರಿನಿಯಮ ಮತ್ತು ಯು.ಜಿ.ಸಿ. ನಿಯಮಾವಳಿಗಳನ್ನು ಗಮನದಲ್ಲಿಟ್ಟು ಕೊಂಡು ವಾರ್ಷಿಕ ಪರಿಶೀಲನೆ ಮಾಡಬೇಕೆಂದು ಸಭೆ ಸೂಚಿಸಿತು ಮತ್ತು ಈ ಕುರಿತು ಸ್ವಾಯತ್ತ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ವಿಷಯಗಳನ್ನು ಸ್ಪಷ್ಟೀಕರಿಸಬೇಕೆಂದು ಸೂಚಿಸಲಾಯಿತು.**

**ವಿಷಯ ಸಂಖ್ಯೆ 5:** **2021–22ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಗಿರುವ ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜಿಗೆ ಬೋಧಕ/ಬೋಧಕೇತರ ಸಿಬ್ಬಂದಿ ಸೃಜನೆ ಮತ್ತು ಹುದ್ದೆಗಳ ನೇಮಕಾತಿಗೆ ಸಂಬಂಧಪಟ್ಟಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ–ಕುರಿತು.**

ಉಲ್ಲೇಖ:–
1. ಸರ್ಕಾರದ ಪತ್ರ ಸಂಖ್ಯೆ: ಇಡಿ 273 ಯುಬಿವಿ 2021 ದಿನಾಂಕ 30.07.2021.
2. ಶಿಕ್ಷಣ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಇಪಿ 169 ಎಸ್‌ಹೆಚ್‌ಹೆಚ್ 2021 ದಿನಾಂಕ: 05.08.2021
3. ಸರ್ಕಾರದ ಪತ್ರ ಸಂಖ್ಯೆ: ಇಡಿ 273 ಯುಬಿವಿ 2021 ದಿನಾಂಕ: 07.08.2021
4. ವಿ.ವಿ ಪತ್ರ ಸಂಖ್ಯೆ:ಬಿಸಿಯು/ ಘಟಕ ಕಾಲೇಜು– ರಚನೆ/190/2021–22, ದಿನಾಂಕ:–18–08–2021
5. ಸರ್ಕಾರ ಪತ್ರದ ಸಂಖ್ಯೆ: ಇಡಿ 273 ಯುಬಿವಿ 2021 ದಿನಾಂಕ: 25.08.2021
6. ವಿ. ವಿ ಪತ್ರ ಸಂಖ್ಯೆ: ಬೆಂ.ನ.ವಿ/ಸಿಬ್ಬಂದಿ/ಸಾನೇ/158/2021–22 ದಿನಾಂಕ: 14.09.2021

***ಪರಮಾರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜನ್ನು ಉಲ್ಲೇಖ (01) ರ ಸರ್ಕಾರದ ಪತ್ರದ ಪ್ರಕಾರ ಮಲ್ಲೇಶ್ವರಂ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜನ್ನು ದಿನಾಂಕ: 03.09.2021 ರಂದು ಪ್ರಾರಂಭಿಸಲಾಗಿದೆ. ಈ ಕಾಲೇಜಿನಲ್ಲಿ NEP ಪ್ರಕಾರ (ಅನುಬಂಧ–1) ರಲ್ಲಿ ಸೂಚಿಸಿರುವಂತೆ Holistic Multidisciplinary ಕೋರ್ಸ್‌ಗಳನ್ನು ಮತ್ತು ವಿಷಯಗಳನ್ನು ಪ್ರಾರಂಭಿಸಲಾಗಿದೆ. ಉಲ್ಲೇಖ (05) ರ ಸರ್ಕಾರದ ಪತ್ರ ದಿನಾಂಕ: 25.08.2021ರಲ್ಲಿ (ಅನುಬಂಧ–2) ಈ ಕಾಲೇಜಿಗೆ ಅವಶ್ಯಕವಿರುವ ಬೋಧಕ/ಬೋಧಕೇತರ ಸಿಬ್ಬಂದಿ ಸೃಜನೆ ಹಾಗೂ ನೇಮಕಾತಿ ಮತ್ತು ಅವಶ್ಯಕ ಅನುದಾನಕ್ಕಾಗಿ 2022–23ನೇ ಆರ್ಥಿಕ ವರ್ಷದಲ್ಲಿ ಪ್ರಸ್ತಾವನೆ ಸಲ್ಲಿಸಲು ನಿರ್ದೇಶಿಸಿರುತ್ತಾರೆ. ಸರ್ಕಾರದ ನಿರ್ದೇಶನದಂತೆ, NEP ಪ್ರಕಾರ ಪದವಿ ವ್ಯಾಸಂಗ 4 ವರ್ಷ ಕಡ್ಡಾಯವಾಗಿದ್ದು, ಅದರ ಪ್ರಕಾರ 4 ವರ್ಷಕ್ಕೆ ವಿಷಯವಾರು ಅಗತ್ಯವಾದ ಬೋಧಕ ಹುದ್ದೆಗಳನ್ನು ಗಣನೆಗೆ ತೆಗೆದುಕೊಂಡು ಪ್ರಸ್ತಾವನೆ ಸಿದ್ದಪಡಿಸಬೇಕಾಗಿದೆ. ಈ ಕೆಳಕಂಡಂತೆ ಬೋಧಕ/ಬೋಧಕೇತರ ಹುದ್ದೆಗಳ ಸೃಜನೆ ಮತ್ತು ಮಂಜೂರಾತಿಗೆ ಪ್ರಸ್ತಾವನೆ ಸಿದ್ಧಪಡಿಸುವ ಅಗತ್ಯವಿರುತ್ತದೆ.

**ಬೋಧಕ ಹುದ್ದೆಗಳು:–**

1 ಕಲಾ ವಿಭಾಗಗಳು – ಸಹಾಯಕ ಪ್ರಾಧ್ಯಾಪಕರು– 85
2 ವಿಜ್ಞಾನ ವಿಭಾಗ – ಸಹಾಯಕ ಪ್ರಾಧ್ಯಾಪಕರು– 94
3 ವಾಣಿಜ್ಯ ವಿಭಾಗ – ಸಹಾಯಕ ಪ್ರಾಧ್ಯಾಪಕರು– 42
(ಅನುಬಂಧ–3)
ಒಟ್ಟು– 221

**ಬೋಧಕೇತರ ಹುದ್ದೆಗಳು:–**

01. ಪ್ರಾಂಶುಪಾಲರು – 01
02. ದೈಹಿಕ ಶಿಕ್ಷಣ ನಿರ್ದೇಶಕರು – 01
03. ಗ್ರಂಥಪಾಲಕರು – 01
04. ಗ್ರೂಪ್ ಸಿ ಹಾಗೂ ಗ್ರೂಪ್ ಡಿ – 74
(ಅನುಬಂಧ–4)
ಒಟ್ಟು – 77

ಈ ಘಟಕ ಮಹಾವಿದ್ಯಾಲಯ ಪ್ರಾರಂಭಿಸಲು ಅಗತ್ಯವಾದ ಆವರ್ತಕ/ಅನಾವರ್ತಕ ವೆಚ್ಚಗಳ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರಮ ಸಂಖ್ಯೆ | ವಿವರ | ವಾರ್ಷಿಕ ವೆಚ್ಚದ ವಿವರ ಲಕ್ಷಗಳಲ್ಲಿ |
|---|---|---|
| | ಅ) ಆವರ್ತಕ ವೆಚ್ಚಗಳು | |
| 1. | ಬೋಧಕೇತರ ಹುದ್ದೆಗಳ ವೇತನ (ಅನುಬಂಧ–5) | 351.17 |
| 2. | ಬೋಧಕ ಹುದ್ದೆಗಳ ವೇತನ (ಅನುಬಂಧ–6) | 2325.91 |
| 3. | ಕಟ್ಟಡ ನಿರ್ವಹಣೆ, ವಿದ್ಯುಚ್ಛಕ್ತಿ ನೀರಿನ ಸರಬರಾಜು, ದೂರವಾಣಿ, ಇತ್ಯಾದಿ ಸಾದಿಲ್ವಾರು | 60.00 |
| | **ಒಟ್ಟು ಆವರ್ತಕ ವೆಚ್ಚ** | **2737.08** |
| | ಆ) ಅನಾವರ್ತಕ ವೆಚ್ಚಗಳು | |
| 4. | ಮೂಲಭೂತ ಸೌಕರ್ಯಗಳನ್ನು ಒದಗಿಸಲು (ಅನುಬಂಧ–7) | 572.00 |
| | **ಆವರ್ತಕ ಹಾಗೂ ಅನಾವರ್ತಕ ವೆಚ್ಚಗಳ ಒಟ್ಟು ಮೊತ್ತ** | **3309.08** |

ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜಿನಲ್ಲಿನ ಕಲಾ ವಿಭಾಗ/ವಿಜ್ಞಾನ ವಿಭಾಗ/ವಾಣಿಜ್ಯ ವಿಭಾಗಗಳಿಗೆ ಒಟ್ಟು ಅವಶ್ಯವಿರುವ 221 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಹಾಗೂ 77 ಬೋಧಕೇತರ ಹುದ್ದೆಗಳ ಸೃಜನೆ ಮತ್ತು ಮಂಜೂರಾತಿ ಮತ್ತು ಈ ಘಟಕ ಮಹಾವಿದ್ಯಾಲಯಕ್ಕೆ 2022-23ನೇ ಅರ್ಥಿಕ ವರ್ಷಕ್ಕೆ ಅಗತ್ಯವಾದ ಆವರ್ತಕ/ಅನಾವರ್ತಕ ವೆಚ್ಚಗಳ ಒಟ್ಟು ಮೊತ್ತ ರೂ. 3308.91 ಲಕ್ಷಗಳಿಗೆ ಆರ್ಥಿಕ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್‌ನ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:**

**ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು.**

**ವಿಷಯ ಸಂಖ್ಯೆ 6:** **ದಿನಾಂಕ: 27.08.2021 ರಂದು ಸರ್ಕಾರಿ ಪತ್ರದಲ್ಲಿ ಸೂಚಿಸಿರುವಂತೆ SCSP/TSP ಯೋಜನೆಯಡಿಯಲ್ಲಿ 2020-21ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು 2021-22ನೇ ಸಾಲಿನಲ್ಲಿ ಮುಂದುವರೆಸಲು ವಿಶ್ವವಿದ್ಯಾನಿಲಯದ ಅನುದಾನದಲ್ಲಿ SCSP ಕಾರ್ಯಕ್ರಮಗಳಿಗಾಗಿ ರೂ. 20.00 ಲಕ್ಷ TSP ಕಾರ್ಯಕ್ರಮಗಳಿಗಾಗಿ ರೂ.7.00 ಲಕ್ಷಗಳು ಒಟ್ಟಾರೆ ರೂ. 27.00 ಲಕ್ಷಗಳನ್ನು ವಿಶ್ವವಿದ್ಯಾನಿಲಯದ ಅನುದಾನದಿಂದ ಒದಗಿಸಿಕೊಳ್ಳಲು ಅನುಮೋದನೆ ಕುರಿತು.**

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಸರ್ಕಾರದಆದೇಶ ಸಂಖ್ಯೆ: ಸಕಿಇ/SCSP-TSP ಕೋಶ/ ಉನ್ನತ ಶಿಕ್ಷಣ/2021-22 ದಿನಾಂಕ: 27.08.2021

***ಪರಾಮರ್ಶಕ ಟಿಪ್ಪಣಿ:***

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ 2021-22ನೇ ಸಾಲಿನಲ್ಲಿ SCSP/TSP ಅಡಿ ಅನುದಾನ ಹಂಚಿಕೆಯಾಗದೇ ಇರುವ ಕಾರಣ ಮುಂದುವರೆದ ಕಾರ್ಯಕ್ರಮಗಳ ಅನುಷ್ಠಾನಕ್ಕೆ SCSP ಅಡಿ ರೂ. 20.00 ಲಕ್ಷ ಮತ್ತು TSP ಅಡಿ ರೂ.7.00 ಲಕ್ಷ ವೆಚ್ಚ ತಗಲುತ್ತಿದ್ದು, ಸದರಿ ವೆಚ್ಚವನ್ನು ರಾಜ್ಯ ಅಭಿವೃದ್ಧಿ ಪರಿಷತ್ತಿನ ನಿರ್ಣಯದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಬರುವ ಆದಾಯದಿಂದ ಭರಿಸಲು ಕ್ರಮ ಕೈಗೊಳ್ಳುವಂತೆ ಸರ್ಕಾರದಿಂದ ತಿಳಿಸಲಾಗಿದೆ.

ಈ ಸಂಬಂಧ ಸರ್ಕಾರದಿಂದ ಅನುದಾನವನ್ನು ನಿರೀಕ್ಷಿಸಿದ್ದು, ಪ್ರಸ್ತುತ ಹಣಕಾಸು ಸಮಿತಿಯು ಅನುಮೋದಿಸಿರುವಂತೆ ವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆ 038-120/2021-22 ರಲ್ಲಿ ಪರಿಶಿಷ್ಟ ಜಾತಿ/ ಪಂಗಡ ಸಂಶೋದನಾ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಹಾಗೂ ಇತರೇ ಸೌಲಭ್ಯಗಳ ಅನುದಾನದಿಂದ ಅನುಷ್ಠಾನಗೊಳಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:**

**ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು. ಸದರಿ ಮೊತ್ತಕ್ಕೆ ಮರುಪಾವತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ವಿನಂತಿಸಬೇಕೆಂದು ಸೂಚಿಸಲಾಯಿತು.**

**ವಿಷಯ ಸಂಖ್ಯೆ 7:** **ಸೃಷ್ಠಿ ಇನ್ಸಿಟ್ಯೂಟ್ ಆಫ್ ಡಿಸೈನ್ & ಟೆಕ್ನಾಲಜಿ ಸಂಸ್ಥೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅನುಚ್ಛೇದ 66(1) ರ ಅನ್ವಯ ಮಾನ್ಯತೆ ಮತ್ತು ಅಂಕಪಟ್ಟಿ ನೀಡುವ ಕುರಿತಂತೆ ರಚಿಸಲಾದ ಸಮಿತಿಯ ವರದಿ ಪರಿಗಣಿಸುವ ಕುರಿತು**

ಉಲ್ಲೇಖ: 1. ದಿನಾಂಕ 16.06.2021 ರ ಸಿಂಡಿಕೇಟ್ ಸಭೆಯ ತೀರ್ಮಾನ
2. ದಿನಾಂಕ 05.07.2021, 06.08.2021, 16.09.2021 ಹಾಗೂ 09.11.2021 ರಂದು ಜರುಗಿದ ಸಮಿತಿಯ ನಡವಳಿಗಳು

***ಪರಾಮರ್ಶಕ ಟಿಪ್ಪಣಿ:***

ದಿನಾಂಕ 16.06.2021 ರಂದು ಜರುಗಿದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ನಿರ್ಣಯದಂತೆ, ಸೃಷ್ಠಿ ಇನ್ಸಿಟ್ಯೂಟ್ ಆಫ್ ಡಿಸೈನ್ & ಟೆಕ್ನಾಲಜಿ ಸಂಸ್ಥೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಅನುಚ್ಛೇದ 66(1) ರ ಅನ್ವಯ ಮಾನ್ಯತೆ ನೀಡಿರುವ ಮತ್ತು ಸದರಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ನೀಡುವ ಕುರಿತಂತೆ ವಸ್ತುಸ್ಥಿತಿಯನ್ನು ವಿವರವಾಗಿ ಅಧ್ಯಯನ ಮಾಡಿ ಉಂಟಾಗಿರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರೋಪಾಯಗಳನ್ನು ಶಿಫಾರಸ್ಸು ಮಾಡಲು ಕುಲಸಚಿವರು(ಮೌಲ್ಯಮಾಪನ) ರವರ ಅಧ್ಯಕ್ಷತೆಯಲ್ಲಿ 5 ಜನ ಸದಸ್ಯರ ಸಮಿತಿ ರಚಿಸಲಾಗಿತ್ತು. ಸದರಿ ಸಮಿತಿ ದಿನಾಂಕ 05.07.2021, 06.08.2021, 16.09.2021 ಹಾಗೂ 09.11.2021 ರಂದು ಸಭೆ ಸೇರಿ ಲಭ್ಯ ದಾಖಲಾತಿಗಳನ್ನು ಪರಿಶೀಲಿಸಿ ಸಂಸ್ಥೆಗೆ ಭೇಟಿ ನೀಡಿ ನಡವಳಿಗಳನ್ನು ಸಿದ್ದಪಡಿಸಿ ಸಲ್ಲಿಸಿರುತ್ತದೆ.

ಸಮಿತಿ ತನ್ನ ವರದಿಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಅನುಸರಿಸುತ್ತಿರುವ ಪರೀಕ್ಷಾ ಕೈಪಿಡಿ ಮತ್ತು ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ಪರಿಶೀಲಿಸಿ, ಸೃಷ್ಠಿ ಇನ್ಸಿಟ್ಯೂಟ್ ಆಫ್ ಡಿಸೈನ್ & ಟೆಕ್ನಾಲಜಿ ಸಂಸ್ಥೆ ತನ್ನ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ನಡೆಸಲು ವಿಶ್ವವಿದ್ಯಾನಿಲಯವನ್ನು ಕೋರುವ ಬದಲು ತಾನೇ ಪರೀಕ್ಷೆಗಳನ್ನು ನಡೆಸಿರುವುದು ನಿಯಮಗಳ ಉಲ್ಲಂಘನೆಯಾಗುತ್ತದೆ ಎಂದು ಪರಿಗಣಿಸಿ ಸತ್ಯಾಂಶಗಳ ಆಧಾರದ ಮೇಲೆ ಕೆಳಗಿನ ಶಿಫಾರಸ್ಸು ಮಾಡಿರುತ್ತದೆ.

***"ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಸೃಷ್ಠಿ ಇನ್ಸಿಟ್ಯೂಟ್ ಆಫ್ ಡಿಸೈನ್ & ಟೆಕ್ನಾಲಜಿ ಸಂಸ್ಥೆಯ ಪ್ರವೇಶಾತಿ ಅನುಮೋದನೆ ನೀಡಿರುವ ವಿದ್ಯಾರ್ಥಿಗಳಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯ Examination Manual ರ ಪ್ರಕಾರ ಪರೀಕ್ಷಾ ಪ್ರಕ್ರಿಯೆಗಳನ್ನು ನಡೆಸಲು ಶಿಫಾರಸ್ಸು ಮಾಡಲಾಗಿದೆ".***

ಸಮಿತಿಯ ಮೇಲಿನ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಿದೆ.

**ನಿರ್ಣಯ:**

**ಸಮಿತಿಯ ವರದಿಯನ್ನು ಒಪ್ಪಿಕೊಂಡು ಎಲ್ಲಾ ಪರೀಕ್ಷೆಗಳನ್ನು ವಿಶ್ವವಿದ್ಯಾನಿಲಯದ ವತಿಯಿಂದ ನಡೆಸಲು ಮತ್ತು ಈಗಾಗಲೇ ಪರೀಕ್ಷೆ ನಡೆಸಿ ಅಂಕಪಟ್ಟಿ ನೀಡಿರುವ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ವಾಪಸ್ಸು ಪಡೆದು ಎಲ್ಲಾ ಪರೀಕ್ಷೆಗಳನ್ನು ವಿಶ್ವವಿದ್ಯಾನಿಲಯದ ವತಿಯಿಂದ ನಡೆಸಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ 8: ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಅನ್ವಯ ವಿಶ್ವವಿದ್ಯಾನಿಲಯ 2022–23 ನೇ ಸಾಲಿನಿಂದ ಪದವಿ(UG) ವ್ಯಾಸಂಗಗಳನ್ನು ಪ್ರಾರಂಭಿಸಲು ಕ್ರಮ ವಹಿಸುವ ಕುರಿತು**

***ಪರಾಮರ್ಶಕ ಟಿಪ್ಪಣಿ:***

ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಅನ್ವಯ, ಬಹುಶಿಸ್ತೀಯ ಶಿಕ್ಷಣ ವ್ಯವಸ್ಥೆ ಮತ್ತು ಬಹು ಹಂತದಲ್ಲಿ ಪ್ರವೇಶ ಹಾಗೂ ನಿರ್ಗಮನದ ನಾಲ್ಕು ವರ್ಷಗಳ ಪದವಿ ಶಿಕ್ಷಣದ ವ್ಯವಸ್ಥೆಯಂತೆ, ಪದವಿ / ನೇರವಾಗಿ ಸ್ನಾತಕೋತ್ತರ ಮತ್ತು ಸಂಶೋಧನಾ ವ್ಯಾಸಂಗಗಳಿಗೆ ಪ್ರವೇಶ ಪಡೆಯಬಹುದಾಗಿದೆ.

ಉನ್ನತ ಶಿಕ್ಷಣದಲ್ಲಿ ಜಿ.ಇ.ಆರ್ (Gross Enrollment Ratio) ನ್ನು ಹೆಚ್ಚುಮಾಡಬೇಕಿದ್ದು ವಿಶ್ವವಿದ್ಯಾನಿಲಯಗಳಲ್ಲಿ ಹೆಚ್ಚು ವಿದ್ಯಾರ್ಥಿಗಳಿಗೆ ಬಹುಶಿಸ್ತೀಯ ಅಧ್ಯಯನ ಮಾಡಲು ಅವಕಾಶ ಕಲ್ಪಿಸಬೇಕಾಗಿದೆ. ಅಲ್ಲದೆ 2035 ರೊಳಗೆ ಸಂಯೋಜನಾ ವ್ಯವಸ್ಥೆ ನಿಲ್ಲಬೇಕೆನ್ನುವುದು ಎನ್.ಇ.ಪಿ–2020 ರ ಉದ್ದೇಶದ ಹಿನ್ನೆಲೆಯಲ್ಲಿ ಕೂಡ ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ ಈ ಪದವಿ(UG) ಶಿಕ್ಷಣ ಜಾರಿಗೆ ತರಬೇಕಾಗಿದೆ.

ಕಾರಣ ಎಲ್ಲಾ ನಿಕಾಯಗಳ ಸ್ನಾತಕೋತ್ತರ ವಿಭಾಗಗಳಲ್ಲಿ 2022–23 ನೇ ಸಾಲಿನಿಂದ ಸ್ನಾತಕ ಪದವಿ ವ್ಯಾಸಂಗಗಳನ್ನು ಪ್ರಾರಂಭಿಸಲು ಹಾಗೂ ಈ ಕುರಿತು ಅಗತ್ಯ ಪೂರ್ವಭಾವಿ ಸಿದ್ದತೆಗಳನ್ನು ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:**

**ಪ್ರಸ್ತಾವನೆಗೆ ಅನುಮೋದನೆ ನೀಡಿ ಈ ಕುರಿತು ರೂಪುರೇಷೆಗಳನ್ನು ಸಿದ್ಧಪಡಿಸಲು ಕುಲಪತಿಗಳ ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿಯನ್ನು ರಚಿಸಬೇಕೆಂದು ಸಭೆಯು ತೀರ್ಮಾನಿಸಿತು.**

**ವಿಷಯ ಸಂಖ್ಯೆ– 9: 2021–22 ನೇ ಸಾಲಿನ ಸ್ನಾತಕೋತ್ತರ ವ್ಯಾಸಂಗಗಳಲ್ಲಿ ಸ್ವಯಂ ಹಣಕಾಸು ವ್ಯಾಸಂಗದ (Self Finance Scheme) ಅಡಿಯಲ್ಲಿ ಹೆಚ್ಚುವರಿ ಪ್ರವೇಶಗಳ ಅನುಮೋದನೆ ಕುರಿತು**

***ಪರಾಮರ್ಶಕ ಟಿಪ್ಪಣಿ:***

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ಪ್ರವೇಶಕ್ಕೆ ಸ್ವಯಂ ಹಣಕಾಸು ಯೋಜನೆ Self Finance Scheme) ಅಡಿಯಲ್ಲಿ ಹೆಚ್ಚುವರಿ ಶುಲ್ಕ ವಿಧಿಸಿ ನಿಗದಿತ ಸಂಖ್ಯೆಯ ಪ್ರವೇಶಗಳನ್ನು ನೀಡಲಾಗುತ್ತದೆ.

ಪ್ರಸ್ತುತ 2021–22 ನೇ ಶೈಕ್ಷಣಿಕ ಸಾಲಿನ ಪ್ರವೇಶಗಳಿಗೆ ವಾಣಿಜ್ಯ, ರಸಾಯನಶಾಸ್ತ್ರ ಮತ್ತು ಜೀವ–ರಸಾಯನಶಾಸ್ತ್ರ ವಿಭಾಗಗಳಿಗೆ ಕೆಳಗೆ ನಮೂಸಿದಂತೆ ಸ್ವಯಂ ಹಣಕಾಸು ಯೋಜನೆ ಅಡಿಯಲ್ಲಿ ಹೆಚ್ಚುವರಿ ಪ್ರವೇಶಗಳನ್ನು ಪರಿಗಣಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿದೆ

1) ವಾಣಿಜ್ಯ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಹೆಚ್ಚಿನ ಬೇಡಿಕೆ ಇರುವುದರಿಂದ ಎಂ.ಕಾಂ ಕೋರ್ಸಿಗೆ 60 ವಿದ್ಯಾರ್ಥಿಗಳ ಹೆಚ್ಚುವರಿ ಪ್ರವೇಶ ಸಂಖ್ಯೆಯ ಪ್ರತ್ಯೇಕ ವಿಭಾಗವನ್ನು ಸ್ವಯಂ ಹಣಕಾಸು ಯೋಜನೆ (Self Finance Scheme) ಅಡಿಯಲ್ಲಿ ಪ್ರಾರಂಭಿಸಲು ಅನುಮೋದನೆ ಕೋರಲಾಗಿದೆ.
2) ಎಂ.ಬಿ.ಎ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಹೆಚ್ಚಿನ ಬೇಡಿಕೆ ಇರುವುದರಿಂದ 60 ವಿದ್ಯಾರ್ಥಿಗಳ ಹೆಚ್ಚುವರಿ ಪ್ರವೇಶ ಸಂಖ್ಯೆಯ ಪ್ರತ್ಯೇಕ ವಿಭಾಗವನ್ನು ಸ್ವಯಂ ಹಣಕಾಸು ಯೋಜನೆ (Self Finance Scheme) ಅಡಿಯಲ್ಲಿ ಪ್ರಾರಂಭಿಸಲು ಅನುಮೋದನೆ ಕೋರಲಾಗಿದೆ.

3) ರಸಾಯನಶಾಸ್ತ್ರ ವಿಭಾಗಕ್ಕೆ ಸ್ವಯಂ ಹಣಕಾಸು ಯೋಜನೆಯಡಿ ಈಗಿರುವ 11 ಪ್ರವೇಶ ಸಂಖ್ಯೆ ಯನ್ನು 21 ಕ್ಕೆ ಹೆಚ್ಚಿಸಲು ಅನುಮೋದನೆ ಕೋರಿದೆ (Organic – 05, Inorganic-03, Physical-02)

4) ಜೀವ ರಸಾಯನಶಾಸ್ತ್ರ ವಿಭಾಗಕ್ಕೆ ಸ್ವಯಂ ಅವಲಂಬಿತ ಯೋಜನೆಯಡಿ ಈಗಿರುವ 06 ಪ್ರವೇಶ ಸಂಖ್ಯೆ ಯನ್ನು 11 ಹೆಚ್ಚಿಸಲು ಅನುಮೋದನೆ ಕೋರಿದೆ.

ಮೇಲಿನ ವಿಭಾಗಗಳ ಹೆಚ್ಚುವರಿ ಪ್ರವೇಶಗಳಿಗೆ ಮತ್ತು ಅಗತ್ಯವಾದ ಮೂಲ ಸೌಕರ್ಯ ಹಾಗೂ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:**

**ಪ್ರಸ್ತಾವನೆಗೆ ಸರ್ವಾನುಮತದ ಅನುಮೋದನೆ ನೀಡಲಾಯಿತು.**

**ವಿಷಯ ಸಂಖ್ಯೆ– 10: 2019-20 ನೇ ಸಾಲಿನ ಆರ್ಥಿಕ ಲೆಕ್ಕತಃಖ್ತೆಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆ ಕುರಿತು.**

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯವು 2019–20 ರ ಆರ್ಥಿಕ ವರ್ಷದ ಲೆಕ್ಕತಃಖ್ತೆಗಳನ್ನು ತಯಾರಿಸಲು ಶ್ರೀ. ಜೈರಾಮ್.ಇ.ಎಸ್, ಚಾರ್ಟರ್ಡ್ ಅಕೌಂಟೆಂಟ್, ಬೆಂಗಳೂರು ಇವರಿಗೆ ವಹಿಸಲಾಗಿದ್ದು, ಸದರಿ ಸಂಸ್ಥೆಯು ದಿನಾಂಕ: 30.03.2021 ರಂದು 2019–20ನೇ ಸಾಲಿನ ಲೆಕ್ಕತಃಖ್ತೆಗಳನ್ನು ತಯಾರಿಸಿ ಸಲ್ಲಿಸಿರುತ್ತಾರೆ. ದಿನಾಂಕ: 21.09.2021 ರಂದು ನಡೆದ 7ನೇ ಹಣಕಾಸು ಸಮಿತಿ ಸಭೆಯಲ್ಲಿ 2019–20ನೇ ಸಾಲಿನ ಆರ್ಥಿಕ ಲೆಕ್ಕತಃಖ್ತೆಯನ್ನು ಅನುಮೋದಿಸಲಾಗಿದೆ.

2019–20ನೇ ಆರ್ಥಿಕ ಸಾಲಿನ ಲೆಕ್ಕತಃಖ್ತೆಗಳನ್ನು ಲಗ್ಗತ್ತಿಸಲಾಗಿದ್ದು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

***ವಿವರಣೆ:***

ವಿತ್ತಾಧಿಕಾರಿಗಳು ಸಭೆಗೆ ಆಗಮಿಸಿ ವಿವರಗಳನ್ನು ಒದಗಿಸಿದರು. ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಎರಡು ವರ್ಷಗಳ (2019 ಮತ್ತು 2020) ಸ್ವೀಕೃತಿಗಳ ಮೊತ್ತದ ಸಾಮ್ಯತೆಯಲ್ಲಿ ವ್ಯತ್ಯಾಸದ ಕುರಿತು ಅಗತ್ಯ ವಿವರಣೆ ನೀಡಲಾಯಿತು. ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳ ಕುರಿತು ಪರಿಶೀಲಿಸುವುದಾಗಿ ವಿತ್ತಾಧಿಕಾರಿಗಳು ತಿಳಿಸಿದರು.

**ನಿರ್ಣಯ:**

**2019–20 ನೇ ಸಾಲಿನ ಆರ್ಥಿಕ ಲೆಕ್ಕ ತಃಖ್ತೆಗಳಿಗೆ ಸರ್ವಾನುಮತದ ಅನುಮೋದನೆ ನೀಡಲಾಯಿತು.**

ವಿಷಯ ಸಂಖ್ಯೆ: 11: ರಾಷ್ಟ್ರೀಯ ಶಿಕ್ಷಣ ನೀತಿ –2020 ರ ಪ್ರಕಾರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬಹುಶಿಸ್ತೀಯ ವ್ಯಾಸಂಗ ನೀಡಬೇಕಾಗಿರುವ ಕಾರಣ, 2022–23 ನೇ ಸಾಲಿನಿಂದ ಹೊಸ ಮಹಾವಿದ್ಯಾಲಯಗಳು ಸಂಯೋಜನೆ ಕೋರಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ, ಕನಿಷ್ಠ 3 ನಿಕಾಯಗಳ ಕೋರ್ಸುಗಳಿಗೆ ಕಡ್ಡಾಯವಾಗಿ ಅರ್ಜಿ ಸಲ್ಲಿಸಲು ಮತ್ತು ಹಾಲಿ ಇರುವ ಏಕಶಿಸ್ತೀಯ ಮಹಾವಿದ್ಯಾಲಯಗಳನ್ನು ಬಹುಶಿಸ್ತೀಯ ಮಹಾವಿದ್ಯಾಲಯಗಳಾಗಿ ಪರಿವರ್ತನೆ ಹೊಂದುವುದನ್ನು ಕಡ್ಡಾಯಗೊಳಿಸುವ ಕುರಿತು.

***ಪರಾಮರ್ಶಕ ಟಿಪ್ಪಣಿ***

ರಾಷ್ಟ್ರೀಯ ಶಿಕ್ಷಣ ನೀತಿ–2020 ಆಶಯದಂತೆ, ಮಹಾವಿದ್ಯಾಲಯಗಳ ಬಹುಶಿಸ್ತೀಯ ಅಧ್ಯಯನಕ್ಕೆ ಅವಕಾಶ ಒದಗಿಸಬೇಕೆಂಬುದು ಶಿಕ್ಷಣ ನೀತಿಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ 2022–23 ನೇ ಸಾಲಿಗಾಗಿ ಹೊಸ ಸಂಯೋಜನೆ ಕುರಿತಂತೆ ಅರ್ಜಿಗಳನ್ನು ಆಹ್ವಾನಿಸುವಾಗ ಆಸಕ್ತ ಸಂಸ್ಥೆಗಳು ಬಹುಶಿಸ್ತೀಯ ವ್ಯಾಸಂಗದ ಅಡಿಯಲ್ಲಿ ಕನಿಷ್ಠ 3 ನಿಕಾಯಗಳ ಕೋರ್ಸುಗಳಿಗೆ ಅರ್ಜಿಯನ್ನು ಸಲ್ಲಿಸುವುದು ಕಡ್ಡಾಯಗೊಳಿಸಬೇಕಾಗಿದೆ.

ಇದಲ್ಲದೆ ಪ್ರಸ್ತುತ ಏಕಶಿಸ್ತೀಯ ಸಂಯೋಜಿತ ಮಹಾವಿದ್ಯಾಲಯಗಳು ಈಗಿರುವ ನಿಕಾಯದ ವ್ಯಾಸಂಗದ ಜೊತೆಗೆ ಇನ್ನು ಎರಡು ನಿಕಾಯಗಳ ಕೋರ್ಸುಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಬೇಕಾಗಿದೆ.

ಕಾರಣ 2022–23 ನೇ ಸಾಲಿಗೆ ಸಂಯೋಜನಾ ಅರ್ಜಿಗಳನ್ನು ಆಹ್ವಾನಿಸುವಾಗ ಹೊಸ ಕಾಲೇಜುಗಳನ್ನು ಪ್ರಾರಂಭಿಸುವ ಸಂಸ್ಥೆಗಳ ಕನಿಷ್ಠ 3 ನಿಕಾಯಗಳ ಕೋರ್ಸುಗಳಿಗೆ ಪ್ರಸ್ತಾವನೆ ಸಲ್ಲಿಸುವುದು ಕಡ್ಡಾಯಗೊಳಿಸುವುದು ಮತ್ತು ಹಾಲಿ ಇರುವ ಏಕಶಿಸ್ತೀಯ ಸಂಯೋಜಿತ ಕಾಲೇಜುಗಳು ಬಹುಶಿಸ್ತೀಯ ವ್ಯಾಸಂಗಗಳ ಕೋರ್ಸುಗಳಿಗೆ ಅರ್ಜಿಗಳನ್ನು ಸಲ್ಲಿಸುವಂತೆ ಸೂಚಿಸಬೇಕಾಗಿದೆ. ಒಂದೇ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಬೇರೆ ಬೇರೆ ಏಕಶಿಸ್ತೀಯ ಕಾಲೇಜುಗಳು ಒಂದೂಗೂಡಿ ಬಹುಶಿಸ್ತೀಯ ಕಾಲೇಜಾಗಿ ಪರಿವರ್ತಿಸುವುದನ್ನು ಪರಿಗಣಿಸಬಹುದಾಗಿದೆ.

ಮೇಲಿನ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ವಿವರಣೆ:***

ರಾಷ್ಟ್ರೀಯ ಶಿಕ್ಷಣ ನೀತಿ–2020 ಅಶಯದಂತೆ, ಮುಂಬರುವ ವರ್ಷಗಳಲ್ಲಿ ಎಲ್ಲಾ ಕಾಲೇಜುಗಳು ಬಹುಶಿಸ್ತೀಯ ಕಾಲೇಜುಗಳಾಗಿ ಮಾರ್ಪಡು ಹೊಂದುವ ಅಗತ್ಯವಿದೆ ಎಂದು ಕುಲಪತಿಗಳು ಸಭೆಗೆ ತಿಳಿಸಿ, ವಿದ್ಯಾರ್ಥಿಗಳು ಬೇರೆ ನಿಕಾಯದ ಒಂದು ವಿಷಯವನ್ನು ಕಡ್ಡಾಯವಾಗಿ ಕಲಿಯಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಈಗಿರುವ ಏಕಶಿಸ್ತೀಯ ಮಹಾವಿದ್ಯಾಲಯಗಳು ಬೇರೆ ನಿಕಾಯದ ವಿಷಯಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. ಮತ್ತು ಹೊಸ ಮಹಾವಿದ್ಯಾಲಯಗಳು ಕಡ್ಡಾಯವಾಗಿ ಬಹುಶಿಸ್ತೀಯ ವಿಷಯಗಳಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದು ತಿಳಿಸಿದರು.

ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡು, ಬೇರೆ ನಿಕಾಯದ ಕೆಲವು ವಿಷಯಗಳನ್ನು ಪ್ರಾರಂಭಿಸಲು ಸೂಚಿಸುವುದರೊಂದಿಗೆ, ಕ್ಲಸ್ಟರ್ ಮಾದರಿಯ ಮಹಾವಿದ್ಯಾಲಯಗಳನ್ನು ಗುರುತಿಸಿ, ಅವುಗಳಲ್ಲಿ ಬೋಧಿಸುವ ವಿಷಯಗಳಲ್ಲಿ ವಿದ್ಯಾರ್ಥಿಗಳು ಪಾಠಪ್ರವಚನ ಪಡೆಯಲು ಅವಕಾಶ ನೀಡಬೇಕು. ಹಾಗೂ ವಿದ್ಯಾರ್ಥಿಗಳು ಪಾವತಿಸುವ ಶುಲ್ಕವನ್ನು ವಿಷಯಕ್ಕನುಗುಣವಾಗಿ ಅನುಪಾತದ ಪ್ರಮಾಣದಲ್ಲಿ ಹಂಚಿಕೆ ಮಾಡುವ ಕುರಿತು ತೀರ್ಮಾನಿಸಬೇಕಾಗುತ್ತದೆ ಎಂದು ಹೇಳಿದರು. ಕುಲಸಚಿವರು (ಮೌಲ್ಯಮಾಪನ) ರವರು ಕ್ಲಸ್ಟರ್ ಮಾದರಿಯ ಮಹಾವಿದ್ಯಾಲಯಗಳ ಕುರಿತು ಸರ್ಕಾರದ ಹಂತದಲ್ಲಿ ಚರ್ಚೆಯಾಗುತ್ತಿದೆ, ಇಡೀ ರಾಜ್ಯಕ್ಕೆ ಅನ್ವಯವಾಗುವ ನೀತಿ ಪ್ರಸ್ತಾಪಿಸುವ ಸಾಧ್ಯತೆ ಇದೆ. ಆದಕಾರಣ ಸರ್ಕಾರದ ತೀರ್ಮಾನವಾಗುವವರೆಗೆ ಕಾಯಬೇಕೆಂದು ಸಭೆಗೆ ತಿಳಿಸಲಾಯಿತು.

ನಿರ್ಣಯ:

ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು, ಕನಿಷ್ಠ ಎರಡು ನಿಕಾಯಗಳಿಗೆ ಸಂಬಂಧಿಸಿದ ವಿಷಯಗಳ ವ್ಯಾಸಂಗಕ್ಕೆ ಸಂಯೋಜನಾ ಅರ್ಜಿಗಳನ್ನು ಸಲ್ಲಿಸಬೇಕೆಂದು ಸೂಚಿಸಲು ಸಭೆ ತೀರ್ಮಾನಿಸಿತು.

**ವಿಷಯ ಸಂಖ್ಯೆ 12:** **ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ವರದಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆ ಕುರಿತು.**

***ಪರಾಮರ್ಶಕ ಟಿಪ್ಪಣಿ:***

ದಿನಾಂಕ: 27.02.2020 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯ ರೂಪುರೇಷೆಗಳನ್ನು ಹಾಗೂ ಮಾದರಿಯನ್ನು ಸಿದ್ದಪಡಿಸಲು ಶ್ರೀ.ಕರಣ್ ಕುಮಾರ್, ಸಿಂಡಿಕೇಟ್ ಸದಸ್ಯರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು.

ಸದರಿ ಸಮಿತಿಯು ದಿನಾಂಕ: 22.06.2020ರಂದು ಸಭೆ ಸೇರಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಅನುಮೋದಿಸಿರುವ ಮಾದರಿ ಪ್ರಕಾರ ವಾರ್ಷಿಕ ವರದಿ ತಯಾರಿಸಲು ನಿರ್ಧರಿಸಿತು. ಅದರಂತೆ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಗೆ ಮತ್ತು ಸಂಯೋಜಿತ ಕಾಲೇಜುಗಳಿಗೆ ಸುತ್ತೋಲೆ ಮುಖಾಂತರ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಸಲ್ಲಿಸುವಂತೆ ಸೂಚಿಸಲಾಯಿತು.

ಅದರಂತೆ ವಿವಿಧ ವಿಭಾಗಗಳ/ಶಾಖೆಗಳಿಂದ ಸ್ವೀಕರಿಸಲಾದ ಮಾಹಿತಿಯ ಮೇರೆಗೆ ಕರಡು ವಾರ್ಷಿಕ ವರದಿಯನ್ನು ಸಿದ್ಧಪಡಿಸಲು ಡಾ॥ ರಮೇಶ್ ಬಿ, ಕುಲಸಚಿವರು (ಮೌಲ್ಯಮಾಪನ) ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ದಿನಾಂಕ: 17.06.2021 ರಂದು ಸಭೆ ಜರುಗಿಸಿ 2018-19 ಮತ್ತು 2019-20ನೇ ಸಾಲಿನ ಕರಡು ವಾರ್ಷಿಕ ವರದಿಯನ್ನು (ಆಂಗ್ಲ ಭಾಷೆಯ) ಸಲ್ಲಿಸಿರುತ್ತದೆ. ಸದರಿ ವರದಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ವಿಶ್ವವಿದ್ಯಾನಿಲಯದ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ವರದಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ ಅನುಚ್ಛೇಧ 50(1) ರ ಪ್ರಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**<u>ನಿರ್ಣಯ:</u>**

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ವರದಿಗಳಿಗೆ ಸರ್ವಾನುಮತದ ಅನುಮೋದನೆ ನೀಡಲಾಯಿತು.**

**ವಿಷಯ ಸಂಖ್ಯೆ 13:** **ಮಾರ್ಚ್/ಏಪ್ರಿಲ್ ಮತ್ತು ಆಗಸ್ಟ್ 2021 ರಲ್ಲಿ ನಡೆದ ಸ್ನಾತಕ ಪದವಿ ಪರೀಕ್ಷೆಯಲ್ಲಿ Malpractice ಮಾಡಿದ ವಿದ್ಯಾರ್ಥಿಗಳ ಮೇಲೆ ತೆಗೆದುಕೊಳ್ಳಲಾಗಿರುವ ಕ್ರಮದ ಬಗ್ಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಕುರಿತು.**

***ಪರಾಮರ್ಶಕ ಟಿಪ್ಪಣಿ.***

ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ನಾಲ್ಕು ಕಾಲೇಜುಗಳ ವಿದ್ಯಾರ್ಥಿಗಳು ಮಾರ್ಚ್/ಏಪ್ರಿಲ್ ಮತ್ತು ಆಗಸ್ಟ್ 2021 ರಲ್ಲಿ ನಡೆದ ಸ್ನಾತಕ ಪರೀಕ್ಷೆಗಳಲ್ಲಿ Malpractice ಮಾಡಿರುವುದನ್ನು ವಿಚಕ್ಷಣದಳ ಪತ್ತೆ ಮಾಡಿ ವರದಿ ಮಾಡಿರುತ್ತಾರೆ. ವಿಚಕ್ಷಣದಳ ಮಾಡಿರುವ ವರದಿಯನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿ-2018ರಲ್ಲಿ ಅಧ್ಯಾಯ 16ರಲ್ಲಿನ Schedule of Penalties ಕ್ರಮ ಸಂಖ್ಯೆ 01 ಮತ್ತು 02ರಲ್ಲಿ ವಿವರಿಸಿರುವಂತೆ ದಂಡ ವಿಧಿಸಲು Malpractice Enquiry Committee ಮುಂದೆ ಮಂಡಿಸಲಾಗಿತ್ತು. ಸಮಿತಿಯು ಕೂಲಂಕುಶವಾಗಿ ಪರಿಶೀಲಿಸಿ, ಸಂಬಂಧಪಟ್ಟ ದೂರುಗಳ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯ/ಒಪ್ಪಿಗೆ ಕೋರಿ ಲಿಖಿತವಾಗಿ ಇ-ಮೇಲ್ ಮೂಲಕ ಪತ್ರ ಕಳುಹಿಸಲಾಗಿತ್ತು. ಇದಕ್ಕೆ ಉತ್ತರವಾಗಿ 7 ವಿದ್ಯಾರ್ಥಿಗಳಲ್ಲಿ 6 ವಿದ್ಯಾರ್ಥಿಗಳು, ಅವರು ಮಾಡಿದ ತಪ್ಪನ್ನು ಒಪ್ಪಿಕೊಂಡು ಲಿಖಿತವಾಗಿ ಪತ್ರಗಳನ್ನು ಇ-ಮೇಲ್

ಮೂಲಕ ಸಲ್ಲಿಸಿರುತ್ತಾರೆ ಹಾಗೂ ದಿನಾಂಕ 17.11.2021 ರಂದು ನಡೆದ Malpractice Enquiry Committee ಸಭೆಯ ಮುಂದೆ ಹಾಜರಾಗಿರುತ್ತಾರೆ. ಮತ್ತೊಬ್ಬ ವಿದ್ಯಾರ್ಥಿ ದೂರವಾಣಿಗಾಗಲಿ, ಇ-ಮೇಲ್ ಮೂಲಕ ಕಳುಹಿಸಿರುವ ಪತ್ರಕ್ಕಾಗಲಿ ಉತ್ತರಿಸಿಲ್ಲ. ಈ ಎಲ್ಲಾ ವಿವರಗಳನ್ನು ದಿನಾಂಕ 17.11.2021 ರಂದು ನಡೆದ Malpractice Enquiry Committee ಸಭೆಯ ಮುಂದೆ ಮಂಡಿಸಲಾಗಿತ್ತು, ವಿವರ ಕೆಳಗಿನಂತಿದೆ.

**ವಿಷಯ: ವಿಜ್ಞಾನ ವಿಭಾಗ**

| Sl No | Course and Subject Details | Student Details | Nature of Malpractice committed by students | Students Replay for the Charges Framed | Penalty imposed |
|---|---|---|---|---|---|
| 01 | BSC 5th Semester<br>*Subject Name:* Electronics 5<br>*QP Code*:11527 | Gaurav Chandra<br>*Reg.No*:S1818030<br>Acharya Institute of Graduate Studies, Soladevanahalli, Bangalore-560107.<br>College Code:3402 | Caught by Flying squad with micro xerox slips. | Student accepted the Malpractice committed. | Denial of the benefit of performance of the examination appeared and penalty of Rs.5,000/- |
| 02 | BCA 3rd Semester<br>*Subject Name:* Object oriented programming using C++<br>*QP Code*:15321 | Krishnendu Jana<br>Reg No: R1921007<br>Aditya Institute of Management Studies and Research, No.12, Kogilu Main Road, Yelahanka, Bangalore-560064.<br>College Code: 3405 | Caught by Flying Squad while Copying (Hand written slip.) | Student accepted the Malpractice committed | Denial of the benefit of performance of the examination appeared and penalty of Rs.5,000/- |

**ವಿಷಯ: ವಾಣಿಜ್ಯ ವಿಭಾಗ**

| Sl No | Course and Subject Details | Student Details | Nature of Malpractice committed by students | Students Replay for the Charges Framed | Penalty imposed |
|---|---|---|---|---|---|
| 01 | BBA 1st Semester<br>*Subject Name: Production and Operation Management*<br>*QP Code: 35124* | Muhammed Muhsin K<br>Reg No: B1928263<br>Sambram Academy of Management Studies, Bangalore-560097.<br>College Code: 3424 | Caught by Flying squad with micro xerox slips. | Student accepted the Malpractice Committed | Denial of the benefit of performance of the examination appeared and penalty of Rs.5,000/- |
| 02 | BBA 1st Semester<br>*Subject Name: Production and Operation Management*<br>*QP Code: 35124* | Muhammed Ansil<br>Reg No: B1928259<br>Sambram Academy of Management Studies, Bangalore-560097.<br>College Code: 3424 | Caught by Flying squad with micro xerox slips. | Student accepted the Malpractice Committed | Denial of the benefit of performance of the examination appeared and penalty of Rs.5,000/- |

| | | | | | |
|---|---|---|---|---|---|
| 03 | BBA 1st Semester *Subject Name: Production and Operation Management QP Code: 35124* | Muhammed Fais T.P Reg No: B1928260 Sambram Academy of Management Studies, Bangalore-560097. College Code: 3424 | Caught by Flying squad with micro xerox slips. | Student accepted the Malpractice Committed | Denial of the benefit of performance of the examination appeared and penalty of Rs.5,000/- |
| 04 | BBA 1st Semester *Subject Name: Production and Operation Management QP Code: 35124* | Muhammed Shammas. P Reg No: B1928265 Sambram Academy of Management Studies College Code: 3424 | Caught by Flying squad with micro xerox slips. | Student accepted the Malpractice Committed | Denial of the benefit of performance of the examination appeared and penalty of Rs.5,000/- |
| 05 | BBA 5th Semester *Subject Name:* Strategic Human Recourse Management *QP Code*:14530 | Mahroof. P. K *Reg No*:B1812666 Karnataka College of Management and Science, #33/2, Tirumenahalli, Hegdenagar, Jakkur Post, Yelahanka(H), Bangalore-560064 College Code:1411 | Caught by Flying squad with xerox slips. | Student accepted the Malpractice Committed | One year Debarred him for two more examinations and penalty of Rs. 10.000/- has been imposed. |

Malpractice ಸಮಿತಿ ಶಿಫಾರಸ್ಸಿನ ಪ್ರಕಾರ ತೆಗೆದುಕೊಳ್ಳಲಾಗಿರುವ ಕ್ರಮದ ಅನುಮೋದನೆಗಾಗಿ ಸಿಂಡಿಕೇಟ್‌ನ ಮುಂದೆ ಮಂಡಿಸಲಾಗಿದೆ.

ನಿರ್ಣಯ:

ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ, **Malpractice** ಸಮಿತಿ ಶಿಫಾರಸ್ಸಿನ ಪ್ರಕಾರ ಕೈಗೊಂಡಿರುವ ಕ್ರಮಕ್ಕೆ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ: 14 : ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ನಡೆಸಲಾದ 43 ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಆಯೋಜನೆ ಕುರಿತು ಪರಿಶೀಲಿಸಲು ರಚಿಸಲಾದ ವಿಚಾರಣಾ ಸಮಿತಿ ಸಲ್ಲಿಸಿರುವ ವರದಿಯ ಕುರಿತು.**

*ಪರಾಮರ್ಶಕ ಟಿಪ್ಪಣಿ:*

ದಿನಾಂಕ 27.08.2020 ರ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಜರುಗಿಸಲಾದ 43 ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಆಯೋಜನೆಗೆ ಸಂಬಂಧಿಸಿದ ಕೆಳಕಂಡ ಅಂಶಗಳ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ಶ್ರೀ.ಬಿ.ಆರ್. ಜಯರಾಮರಾಜೇ ಅರಸ್, ನಿವೃತ್ತ ಐ.ಎ.ಎಸ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯನ್ನು ರಚಿಸಲಾಗಿತ್ತು.

ಅ) 43 ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಪ್ರಾರಂಭದಿಂದ ಜರುಗಿದ ವಿವಿಧ ಚಟುವಟಿಕೆಗಳು.

ಆ) 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಸಂಬಂಧಿಸಿದ ಹಣಕಾಸು ವ್ಯವಹಾರಗಳು.

ಇ) ಕಾರ್ಯಕ್ರಮ ಅನುಷ್ಠಾನದಲ್ಲಿ ಅನುಸರಿಸಿದ ವಿಧಿವಿಧಾನಗಳು.

ಸದರಿ ಸಮಿತಿ ವಿಚಾರಣೆಗೆ ವಹಿಸಲಾದ ಅಂಶಗಳ ಕುರಿತು ವಿಚಾರಣೆ ನಡೆಸಿ, ದಾಖಲೆಗಳನ್ನು ಪರಿಶೀಲಿಸಿ, ಸಂಬಂಧಿಸಿದ ಸಮಿತಿಗಳ ಸದಸ್ಯರು ಮತ್ತು ಅಧಿಕಾರಿಗಳ, ಸಿಬ್ಬಂಧಿಗಳ ಹೇಳಿಕೆಗಳನ್ನು ಪಡೆದು 10 ಶಿಫಾರಸ್ಸುಗಳನ್ನು ಒಳಗೊಂಡ ವಿಚಾರಣಾ ವರದಿಯನ್ನು ಸಮಿತಿಯ ಅಧ್ಯಕ್ಷರು ದಿನಾಂಕ 25.10.2021 ರಂದು ಸಲ್ಲಿಸಿರುತ್ತಾರೆ. ಸಮಿತಿಗೆ ವಹಿಸಲಾಗಿದ್ದ ವಿಷಯದ ಅಂಶಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ಅ) ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಜರುಗಿದ 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಆಯೋಜನೆ ಕಾರ್ಯ ಚಟುವಟಿಕೆಗಳು 2018 ನೇ ಮೇ ತಿಂಗಳಿಂದ ಆರಂಭಿಸಲಾಗಿದ್ದು, ಜನವರಿ 21, 2020 ರಂದು ಪರಿಕ್ರಮವಾಗಿದೆ.

ಆ) ಈ ಸಂಭಂಧ ವಿವರವಾದ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮತ್ತು ಸಂಬಂಧಿಸಿದ ಕಾಲೇಜುಗಳ ಹೇಳಿಕೆಗಳು ಮತ್ತು ಅಭಿಪ್ರಾಯಗಳನ್ನು ಪರಿಶೀಲಿಸಿದ ನಂತರ ಸಮಿತಿಯು ಹಣಕಾಸು ವ್ಯವಹಾರಗಳು ಪಾರದರ್ಶಕವಾಗಿ ನಡೆದಿದ್ದು, ಸಂಘಟನಾ ಸಮಿತಿಯು ಅಪಾರದರ್ಶಕವಾಗಿ ಹಣಕಾಸು ವ್ಯವಹಾರವನ್ನು ನಿರ್ವಹಿಸಿರುವುದಿಲ್ಲ ಎಂದು ಸಾರಾಂಶೀ ಕರಿಸಲಾಗಿದೆ.

ಇ) ಸಮಿತಿಯ ಅಭಿಪ್ರಾಯದಂತೆ 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಸಂಘಟನಾ ಸಮಿತಿಯು ಯಾವುದೇ ಹಣವನ್ನು ನೇರವಾಗಿ ಖರ್ಚುಮಾಡಿರುವುದಿಲ್ಲ. ಖರ್ಚುವೆಚ್ಚುಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳ ಕೋರಿಕೆ ಮೇಲೆ ಸಂಯೋಜಿತ ಕಾಲೇಜುಗಳಿಂದ ಮಾಡಲಾಗಿದೆ. ವಾಸ್ತವವಾಗಿ ಇಡೀ ಕಾರ್ಯಕ್ರಮವನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸಂಯೋಜಿತ ಕಾಲೇಜುಗಳಿಂದ ನಿರ್ವಹಿಸಲಾಗಿದೆ. ಆದುದರಿಂದ ಸಂಘಟನಾ ಸಮಿತಿಯು KTTP ಕಾಯಿದೆಯನ್ನು ಅನುಸರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಸಂಘಟನಾ ಸಮಿತಿಯು ನಗದು ರೂಪದಲ್ಲಾಗಲಿ ಅಥವಾ ಬ್ಯಾಂಕ್ ಖಾತೆಗೆ ಚೆಕ್ ಅಥವಾ ಡಿ.ಡಿಗಳನ್ನು ಬ್ಯಾಂಕ್ ಖಾತೆಗೆ ಜಮಾಮಾಡಿರುವುದಿಲ್ಲ, ಕಾರಣ KTTP ಕಾಯಿದೆಯನ್ನು ಪಾಲಿಸುವ ಅವಶ್ಯಕತೆ ಕಂಡುಬರುವುದಿಲ್ಲ ಎಂದು ಅಭಿಪ್ರಾಯಪಡಲಾಗಿದೆ.

ಮೇಲಿನ ವಿಚಾರಣಾ ಸಮಿತಿ ವರದಿಯ ಸಾರಾಂಶಗಳನ್ನು ಸಿಂಡಿಕೇಟ್ ಸಭೆಯ ಮುಂದೆ ಅನುಮೋದನೆಗೆ ಮಂಡಿಸಿದೆ.

ನಿರ್ಣಯ:

**ಸಮಿತಿಯ ವರದಿಯೊಂದಿಗೆ ವಿಷಯವನ್ನು ಮರುಮಂಡಿಸಲು ಸೂಚಿಸಿ ಪ್ರಸ್ತಾವನೆಯನ್ನು ಮುಂದಿನ ಸಭೆಗೆ ಮುಂದೂಡಲಾಯಿತು.**

**ವಿಷಯ ಸಂಖ್ಯೆ: 15 : ಮೇವಾ ಪದವಿ ಕಾಲೇಜಿಗೆ ಬದಲು ವೇನ್‌ಗಾರ್ಡ್ ಬ್ಯುಸಿನೆಸ್ ಸ್ಕೂಲ್ ಎಂದು ಹೆಸರು ಬದಲಾವಣೆ ಕುರಿತು**

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದವ್ಯಾಪ್ತಿಗೆ ಬರುವ ಮೇವಾ ಪದವಿ ಕಾಲೇಜಿನ ಆಡಳಿತ ಮಂಡಳಿಯು ಕಾಲೇಜಿ ಹೆಸರನ್ನು ವೇನ್‌ಗಾರ್ಡ್‌ಬ್ಯುಸಿನೆಸ್ ಸ್ಕೂಲ್ ಎಂದು ಬದಲಾವಣೆ ಮಾಡಿಕೊಡಬೇಕೆಂದು ಪತ್ರದಲ್ಲಿ ಕೋರಿರುತ್ತಾರೆ.

ಸದರಿ ಕಾಲೇಜಿನ ಮೂಲ ಕಡತವನ್ನು ಪರಿಶೀಲಿಸಿದಾಗ, ಕರ್ನಾಟಕ ಅಧಿನಿಯಮ 59ರ ಪ್ರಕಾರ 2020-21ನೇ ಶೈಕ್ಷಣಿಕ ವರ್ಷದ ಸಂಯೋಜನಾ ನವೀಕರಣಕ್ಕೆ ಅನ್‌ಲೈನ್‌ನ ಅರ್ಜಿಯಲ್ಲಿ ತಂತ್ರಾಂಶ ಅಂಖಣದಲ್ಲಿ ನಮೂದಿಸಿಲ್ಲವೆಂಬ ಅಂಶವು ಕಂಡುಬಂದಿರುತ್ತದೆ. ಇದಕ್ಕೆ ಸಂಬಂಧಿಸಿದ ಸದರಿ ಕಾಲೇಜಿನವರು ದಿನಾಂಕ: 11.08.2020 ರಂದು ಒಟ್ಟು ಮೊತ್ತ ರೂ.5,84,100/- ಗಳನ್ನು UTRSBINR52020081100082307 ವಿಶ್ವವಿದ್ಯಾನಿಲಯಕ್ಕೆ ಸಂದಾಯ ಮಾಡಿರುತ್ತಾರೆ. ಈ

ಮೊತ್ತದಲ್ಲಿ ಕಾಲೇಜಿನ ಹೆಸರು ಬದಲಾವಣೆಗೆ ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಶುಲ್ಕ ರೂ. 39,600/- ಗಳು ಒಳಗೊಂಡಿರುತ್ತದೆ.

ಸದರಿ ಕಾಲೇಜಿನ ಹೆಸರು ಬದಲಾವಣೆಯ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಆದರೆ ಇಲ್ಲಿಯವರೆವಿಗೂ ಸರ್ಕಾರದಿಂದ ಮಾಹಿತಿ ಲಭ್ಯವಿರುವುದಿಲ್ಲ.

ಆದುದರಿಂದ, ಸದರಿ ಕಾಲೇಜಿನ ಆಡಳಿತ ಮಂಡಳಿಯು ಕಾಲೇಜಿನ ಹೆಸರು ಬದಲಾವಣೆಯ ಬಗ್ಗೆ ಹಲವಾರು ಪತ್ರಗಳನ್ನು ನೀಡಿ, ಕೋರಿರುವಂತೆ, ಕಾಲೇಜಿನ ಹೆಸರು **ವೇನ್‌ಗಾರ್ಡ್ ಬ್ಯುಸಿನೆಸ್ ಸ್ಕೂಲ್** ಎಂದು ಬದಲಾವಣೆ ಮಾಡಿಕೊಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಮುಂದೆ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

***ವಿವರಣೆ :***

ಮಹಾವಿದ್ಯಾಲಯದವರು ಆಗಸ್ಟ್ 2020 ರಲ್ಲಿ ನಿಗದಿತ ಶುಲ್ಕ ಭರಿಸಿ ಅರ್ಜಿಸಲ್ಲಿಸಿದ್ದು, ಹೆಸರು ಬದಲಾವಣೆ ಪರಿಗಣನೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು ಎಂದು ಅಭಿಪ್ರಾಯ ಪಡೆಯಲಾಯಿತು. ವಿಳಾಸ ಬದಲಾವಣೆ ಇದ್ದಲ್ಲಿ ಮೂಲಭೂತ ಸೌಕರ್ಯಗಳ ಕುರಿತು ತನಿಖೆ ಅಗತ್ಯವಾಗುತ್ತದೆ.

**ನಿರ್ಣಯ:**

**ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು.**

ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಮೇಲಿನ ತೀರ್ಮಾನಕ್ಕೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು.

**ವಿಷಯ ಸಂಖ್ಯೆ: 16 :** **ವಾಣಿಜ್ಯ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿನಿಗೆ ವಾಣಿಜ್ಯ ವಿಭಾಗದ ಮುಖ್ಯಸ್ಥರು, ಡೀನರು ಮತ್ತು ಸಂಶೋಧನಾ ಮಾರ್ಗದರ್ಶರಾಗಿದ್ದ ಡಾ. ಎಂ ಮುನಿನಾರಾಯಣಪ್ಪ ರವರು ಕಿರುಕುಳ ನೀಡುತ್ತಿರುವ ದೂರಿನ ಹಿನ್ನಲೆಯಲ್ಲಿ ಅವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957 ನಿಯಮ 10ರ ಪ್ರಕಾರ ಅಮಾನತ್ತು ಪಡಿಸಿರುವ ಕ್ರಮದ ಸ್ಥಿರೀಕರಣ ಮತ್ತು ಇಲಾಖಾ ವಿಚಾರಣೆಯನ್ನು ಜರುಗಿಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಕ ಮಾಡುವ ಕುರಿತು.**

***ಪರಾಮರ್ಶಕ ಟಿಪ್ಪಣಿ:***

ವಾಣಿಜ್ಯ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯೊಬ್ಬರು ತಮ್ಮ ಸಂಶೋಧನಾ ಮಾರ್ಗದರ್ಶಕರು, ವಿಭಾಗದ ಮುಖ್ಯಸ್ಥರು ಮತ್ತು ಡೀನರಾಗಿರುವ ಡಾ.ಎಂ.ಮುನಿನಾರಾಣಪ್ಪ ರವರು ಸಂಶೋಧನಾ ವಿದ್ಯಾರ್ಥಿಗಳ ನಡುವೆ ತಾರತಮ್ಯ ಮಾಡುತ್ತಿದ್ದಾರೆ ಮತ್ತು ಅವರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಉಲ್ಲೇಖ (1) ಮತ್ತು (2) ರಲ್ಲಿ ತಿಳಿಸಿದ 4 ಪ್ರತ್ಯೇಕ ದೂರುಗಳನ್ನು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಸಲ್ಲಿಸಿದ್ದಾರೆ. ಸದರಿ ದೂರುಗಳಲ್ಲಿ ತಾವು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಸದರಿ ಪ್ರಾಧ್ಯಾಪಕರ ವಿರುದ್ಧ ದೂರು ಸಲ್ಲಿಸಿರುವುದಕ್ಕೆ ಪ್ರತಿಕಾರದ ಕ್ರಮವಾಗಿ ವೈಯುಕ್ತಿಕ ಕಿರಿಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಅವರು ಕೆಳಗಿನಂತೆ ಮಾತುಗಳನ್ನು ಬಳಸಿದ್ದಾರೆ ಎಂದು ತಿಳಿಸಿದ್ದಾರೆ.

I have been personally targeted for bringing the same to the notice of the authorities and have been harassed for speaking up against the wrong practices in the department which is happening for almost a year. In spite of repeatedly requesting him to take action such candidates he in turn has made the statement which I quote "You will not question me about these practices I have the privilege of allowing her and I will continue to allow her to sign and if you have a problem you can discontinue the course and leave the university because you are creating unnecessary issues and you don't have

the right to question in these matters, you can even go to the registrar regarding the same matter I will watch what will happen".

ಸದರಿ ಮಾರ್ಗದರ್ಶಕರ ನಡತೆ ಮತ್ತು ಅವರ ಮಾತಿನ ಶೈಲಿ ತಮ್ಮ ಗೌರವಕ್ಕೆ ಚ್ಯುತಿ ತಂದಿದೆ ಎಂದು ತಿಳಿಸಿ ಅವರ ಅಡಿಯಲ್ಲಿ ಸಂಶೋಧನೆ ಮುಂದುವರೆಸುವುದು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದಾರೆ. ಸದರಿ ಪ್ರಾಧ್ಯಾಪಕರು ವಹಿಸುವ ಕೆಲಸ, ನಡೆಸಿಕೊಳ್ಳುವ ರೀತಿ, ಯಾವುದೇ ರೀತಿಯಿಂದ ಸಂಶೋಧನೆಗೆ ಸಂಬಂಧಿಸಿಲ್ಲವಾದರೂ ಅನಿವಾರ್ಯವಾಗಿ ನಿರ್ವಹಿಸುವ ಪರಿಸ್ಥಿತಿ ಇದೇ ಎಂದು ತಿಳಿಸಿದ್ದಾರೆ. ಅವರ ಮಾರ್ಗದರ್ಶನದಿಂದ ತಮ್ಮನ್ನು ಬದಲಾವಣೆ ಮಾಡಬೇಕೆಂದು ಹಾಗೂ ಸೂಕ್ತ ಶಿಸ್ತು ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

ಸಂಶೋಧನಾ ವಿದ್ಯಾರ್ಥಿನಿಯು ದಿನಾಂಕ: 15.11.2021 ಹಾಗೂ 18.11.2021 ರಲ್ಲಿ ಸಲ್ಲಿಸಿದ್ದ ದೂರು ಅರ್ಜಿಯಲ್ಲಿನ ಆರೋಪಗಳಿಗೆ ವಿವರಣೆ ಸಲ್ಲಿಸುವಂತೆ, ದಿನಾಂಕ: 19.11.2021 ಮತ್ತು 24.11.2021 ಕ್ಕೆ ಸದರಿ ಪ್ರಾಧ್ಯಾಪಕರು, ಮುಖ್ಯಸ್ಥರು ಮತ್ತು ಡೀನ್ ವಾಣಿಜ್ಯ ನಿಕಾಯ ಅವರಿಗೆ ಕಾರಣ ಕೇಳುವ ಸೂಚನಾ ಪತ್ರವನ್ನು ನೀಡಲಾಗಿತ್ತು. ಈ ಸೂಚನಾ ಪತ್ರಗಳಿಗೆ ಅವರಿಂದ ಉತ್ತರ ಬಂದಿರುವುದಿಲ್ಲ.

ಇದೇ ರೀತಿ ಸದರಿ ಪ್ರಾಧ್ಯಾಪಕರ ಅಡಿಯಲ್ಲಿ ಸಂಶೋಧನೆ ಮಾಡುತ್ತಿರುವ ಇನ್ನೂ ಇಬ್ಬರು ವಿದ್ಯಾರ್ಥಿಗಳು ದಿನಾಂಕ. 18.11.2021 ಮತ್ತು 23.11.2021 ರಂದು ದೂರುಗಳನ್ನು ನೀಡಿ ವಿದ್ಯಾರ್ಥಿಗಳ ಮಧ್ಯೆ ತಾರತಮ್ಯ ಮಾಡುತ್ತಿರುವುದನ್ನು ತಿಳಿಸಿ, ಒಬ್ಬ ಸಂಶೋಧನಾ ವಿದ್ಯಾರ್ಥಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ತಮ್ಮನ್ನು ಕಡೆಗಣಿಸುತ್ತಿರುವುದರಿಂದ ಮಾನಸಿಕ ಕಿರುಕುಳ ಉಂಟಾಗಿದೆಯೆಂದು ಆರೋಪ ಮಾಡಿರುತ್ತಾರೆ. ಸಂಶೋಧನಾ ವಿದ್ಯಾರ್ಥಿಗೆ ಸಲ್ಲಬೇಕಾಗಿರುವ ಯಾವುದೇ ತರಹದ ಸವಲತ್ತುಗಳಾಗಲಿ, ಶಿಷ್ಯವೇತನವಾಗಲಿ ನೀಡದೆ ಇರುವುದರಿಂದ ಜೀವನ ನಡೆಸುವುದು ಸಹ ಕಷ್ಟಕರವಾಗಿದೆಯೆಂದು ಆರೋಪಿಸುತ್ತಾ, ಮಾನಸಿಕ ಒತ್ತಡ ಹೆಚ್ಚಾಗುತ್ತಿರುವುದರಿಂದ ಮಾರ್ಗದರ್ಶಕರನ್ನು ಬದಲಿಸುವಂತೆ ಹಾಗೂ ಶಿಸ್ತುಕ್ರಮ ಜರುಗಿಸುವಂತೆ ಅರ್ಜಿಯಲ್ಲಿ ಕೋರಿರುತ್ತಾರೆ.

ಮತ್ತೊಬ್ಬ ಸಂಶೋಧನಾ ವಿದ್ಯಾರ್ಥಿ ದಿನಾಂಕ: 23.11.2021 ರಂದು ದೂರು ಅರ್ಜಿ ಸಲ್ಲಿಸಿದ್ದು ಈ ಅರ್ಜಿಯಲ್ಲಿ ಪೂರ್ಣಾಕಾಲಿಕ ಸಂಶೋಧನಾ ವಿದ್ಯಾರ್ಥಿಯಾಗಿ ಬೆಳಗ್ಗೆಯಿಂದ ಸಂಜೆಯವರೆಗೆ ವಿಭಾಗದಲ್ಲಿದ್ದರೂ ತಮ್ಮ ಜೊತೆಯ, ಸಹ ಸಂಶೋಧನಾ ವಿದ್ಯಾರ್ಥಿನಿಗೆ ಸಂಜೆ 4 ಗಂಟೆಗೆ ವಿಭಾಗಕ್ಕೆ ಬಂದು ಹಾಜರಾತಿಯಲ್ಲಿ ಸಹಿ ಮಾಡಿದರೂ ಅವರಿಗೆ ಹೆಚ್ಚಿನ ಆದ್ಯತೆ ನೀಡಿ ತಮಗೆ ಮಾನಸಿಕ ಕಿರುಕುಳ ನೀಡುತ್ತಿರುವುದರಿಂದ ಮನಸ್ಸಿಗೆ ಅಘಾತವಾಗಿದೆಯೆಂದು ಆರೋಪ ಮಾಡುತ್ತಾ ಮಾರ್ಗದರ್ಶಕರನ್ನು ಬದಲಾವಣೆ ಮಾಡಿಕೊಟ್ಟು ಒಳ್ಳೆಯ ಮಾರ್ಗದರ್ಶಕರಲ್ಲಿ ಪಿಹೆಚ್‌ಡಿ ಪೂರೈಸಲು ಅವಕಾಶ ಕಲ್ಪಿಸಿಕೊಡುವಂತೆ ಅರ್ಜಿಯಲ್ಲಿ ಮನವಿ ಮಾಡಿಕೊಂಡಿರುತ್ತಾರೆ.

ಸದರಿ ಸಂಶೋಧನಾ ವಿದ್ಯಾರ್ಥಿಗಳು ಮಾಡಿರುವ ಈ ಮೇಲಿನ ಆರೋಪಗಳ ಕುರಿತು ಕಾರಣ ಕೇಳಿ ಸೂಚನಾ ಪತ್ರ ಸಂಖ್ಯೆ: ಬೆಂ.ನ.ವಿ/ಸಿಬ್ಬಂದಿ1&2/ಸೂ.ಪ/214/2021-22 ದಿನಾಂಕ: 17.11.202 ಮತ್ತು ಸಂಖ್ಯೆ:ಬೆಂ.ನ.ವಿ/ಸಿಬ್ಬಂದಿ1&2/ಸೂ.ಪ/229/2021-22 ದಿನಾಂಕ: 25.11.2021 ರಂದು ಜಾರಿಗೊಳಿಸಲಾಗಿದೆ.

ಪಿಹೆಚ್‌ಡಿ ಮಾರ್ಗದರ್ಶಕರಾದ ಡಾ॥ ಎಂ. ಮುನಿನಾರಾಯಣಪ್ಪ, ಪ್ರಾಧ್ಯಾಪಕರು ವಾಣಿಜ್ಯ ವಿಭಾಗ ಅವರ ವಿರುದ್ಧ ಸಂಶೋಧನಾ ವಿದ್ಯಾರ್ಥಿನಿಯೊಬ್ಬರ ಸಲ್ಲಿಸಿರುವ ದೂರುಗಳ ಸಂಬಂಧ ರಚಿಸಲಾದ Women Grievance Redressal Cell ನವರು ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಮಾನ್ಯ ಕುಲಪತಿಗಳ ಆದೇಶ ದಿನಾಂಕ: 25.11.2021 ರಂತೆ ಸಂಪೂರ್ಣವಾಗಿ ವಿಚಾರಣೆ ಮಾಡಿ ಕೂಡಲೇ ವರದಿಯನ್ನು ದಿನಾಂಕ: 26.11.2021 ರ ಮಧಾಹ್ನ 3.00 ಗಂಟೆಯೊಳಗೆ ನೀಡುವಂತೆ Women Grievance Redressal Cell ಕೋಶದ ಮುಖ್ಯಸ್ಥರಿಗೆ ದಿನಾಂಕ: 25.11.2021 ಟಿಪ್ಪಣಿ ಮುಖೇನ ಕೋರಲಾಯಿತು.

ಈ ಕೋಶದ ಮುಖ್ಯಸ್ಥರು ದಿನಾಂಕ: 26.11.2021 ರಂದು ಇದಕ್ಕೆ ಸಂಬಂಧಿಸಿದಂತೆ ಪತ್ರ ಸಲ್ಲಿಸಿದ್ದು ಈ ಪತ್ರದಲ್ಲಿ ಕೆಳಕಂಡ ಅಂಶಗಳ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

1. As one of the member Dr. M. Nirmala is related to the accused in the complaint given by the student so replacement of Member is required.
2. As one of the Committee member Smt. C.E. Vasantha Kumari has been repatriated to Parent University replacement of member is required.
3. As per UGC Notification dated: 2 May 2016 (Sl. No. 04 (d)) one representative from an NGO.

ಮೇಲೆ ಸೂಚಿಸಿದ ಇಬ್ಬರು ಸದಸ್ಯರನ್ನು ಬದಲಾಯಿಸುವಂತೆ ಹಾಗೂ ಕ್ರಮ ಸಂಖ್ಯೆ (3) ರಲ್ಲಿನ As per UGC Notification dated: 2 May 2016 (Sl. No. 04 (d)) one representative from an NGO ಪ್ರಕಾರ ಒಬ್ಬರು ಸದಸ್ಯರನ್ನು ಸೇರ್ಪಡೆ ಮಾಡಿ ಕಾನೂನಾತ್ಮಕ ಸಮಸ್ಯೆ ಉದ್ಭವಿಸಿದಲ್ಲಿ ಒಬ್ಬರು ವಕೀಲರು ಸದಸ್ಯರಾಗಿದ್ದರೇ ಸೂಕ್ತವೆಂದು ಅಭಿಪ್ರಾಯ ನೀಡಿ, ಈಗಾಗಲೇ ರಚಿತವಾಗಿರುವ ಸಮಿತಿಯನ್ನು ಮಾರ್ಪಾಡು ಮಾಡಿಕೊಡುವಂತೆ ಕೋರಿರುತ್ತಾರೆ.

ಈ ಕುರಿತು ಯುಜಿಸಿ ಅಧಿಸೂಚನೆ ದಿನಾಂಕ: 02-05-2016 (4) ರಂತೆ ವಿಶ್ವವಿದ್ಯಾನಿಲಯದಲ್ಲಿ Gender Sensitization Against Sexual Harassment Internal Complaint Committee (ICC) ಕೆಳಗಿನಂತೆ ರಚನೆಯಾಗಬೇಕಾಗಿದೆ.

(a) A Presiding Officer who shall be a woman faculty member employed at a senior level (not below a Professor in case of a university. and not below an Associate Professor or Reader in case of a college) at the educational institution, nominated by the Executive Authority ;

Provided that in case a senior level woman employee is not available, the Presiding Officer shall be nominated from other offices or administrative units of the workplace referred to in sub-section 2(o);

Provided further that in case the other offices or administrative units of the workplace do not have a senior level woman employee, the Presiding Officer shall be nominated from any other workplace of the same employer or other department or organization;"

(b) two faculty members and two non-teaching employees, preferably committed to the cause of women or who have had experience in social work or have legal knowledge, nominated by the Executive Authority;

(c) Three students, if the matter involves students, who shall be enrolled at the undergraduate, master's, and research scholar levels respectively, elected through transparent democratic procedure;

(d) one member from amongst non-government organizations or associations committed to the cause of women or a person familiar with the issues relating to sexual harassment, nominated by the Executive Authority.

ಮೇಲಿನ ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ, ಮಹಿಳಾ ಸಂಶೋಧನಾ ವಿದ್ಯಾರ್ಥಿನಿ ಹಾಗೂ ಇತರ ಇಬ್ಬರು ವಿದ್ಯಾರ್ಥಿಗಳು ನೀಡಿರುವ 4 ದೂರುಗಳು ಮೇಲ್ನೋಟಕ್ಕೆ ಸರಿಯೆಂದು ಕಂಡುಬಂದಿದ್ದು ವಿಶ್ವವಿದ್ಯಾನಿಲಯದ ನಡತೆ ಪರಿನಿಯಮ 27.3 (1) ಉಲ್ಲಂಘಿಸಿರುವ ಕಾರಣ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957 ನಿಯಮ 10 ರ ಪ್ರಕಾರ ಡಾ. ಎಂ. ಮುನಿನಾರಾಯಣಪ್ಪ, ಪ್ರಾಧ್ಯಾಪಕರು,

ವಾಣಿಜ್ಯ ವಿಭಾಗ ಅವರನ್ನು, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಬೆಂ.ನ.ವಿ.ವಿ/ಅಮಾನತ್ತು/ಡಾ. ಎಂ. ಮುನಿನಾರಾಯಣಪ್ಪ/2021–22 ದಿನಾಂಕ: 26.11.2021 ರ ಪ್ರಕಾರ ವಿಚಾರಣೆಯನ್ನು ಕಾಯ್ದಿರಿಸಿ ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

ದಿನಾಂಕ: 02.05.2016 ಯುಜಿಸಿ ಅಧಿಸೂಚನೆ ಪ್ರಕಾರ ಸದ್ಯ ವಿಶ್ವವಿದ್ಯಾನಿಲಯದಲ್ಲಿ ರಚಿಸಲಾಗಿರುವ Women Grivenance Redressal Cell ಅನ್ನು Internal Complaint Committee (ICC) ಎಂದು ಪುನರ್ ರಚಿಸಿ ಈ ಕೋಶಕ್ಕೆ ಪ್ರಕರಣವನ್ನು ವಹಿಸುವ ಬಗ್ಗೆ ಮತ್ತು ಸಿ.ಸಿ.ಎ ನಿಯಮಗಳ ಅಡಿಯಲ್ಲಿ ವಿಚಾರಣಾ ನಡೆಸಲು ಒಬ್ಬ ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಲು ಅಥವಾ ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳಲ್ಲಿ ಒಬ್ಬರನ್ನು ನೇಮಕ ಮಾಡಲು ಮತ್ತು ಒಬ್ಬ ಮಂಡನಾಧಿಕಾರಿಯಾಗಿ ನೇಮಕ ಮಾಡಬಹುದಾಗಿದೆ.

ಮೇಲೆ ಪ್ರಸ್ತಾಪಿಸಿದ ಅಂಶಗಳ ಹಿನ್ನೆಲೆಯಲ್ಲಿ (1) ವಾಣಿಜ್ಯ ವಿಭಾಗದ ಮಹಿಳಾ ವಿದ್ಯಾರ್ಥಿನಿ ಹಾಗೂ ಇನ್ನೂ ಇಬ್ಬರು ಸಂಶೋಧನಾ ವಿದ್ಯಾರ್ಥಿಗಳು ನೀಡಿದ ದೂರಿನ ಆಧಾರದ ಮೇಲೆ ಡಾ. ಎಂ. ಮುನಿನಾರಾಯಣಪ್ಪ, ಪ್ರಾಧ್ಯಾಪಕರನ್ನು ಆಮಾನತ್ತುಗೊಳಿಸಿರುವ ಕ್ರಮದ ಸ್ಥಿರೀಕರಣಕ್ಕಾಗಿ, (2) ಡಾ. ಎಂ. ಮುನಿನಾರಾಯಣಪ್ಪ, ಪ್ರಾಧ್ಯಾಪಕರು ಇವರ ವಿರುದ್ಧ ದೋಷಾರೋಪಣ ಪಟ್ಟಿಗಳನ್ನು ಸಿದ್ಧಪಡಿಸಿ ಅವರಿಗೆ ಜಾರಿಗೊಳಿಸಲು, (3) ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತವಿರುವ Women Grivenance Redressal Cell ಅನ್ನು ದಿನಾಂಕ: 02.05.2016 ಯುಜಿಸಿ ಅಧಿಸೂಚನೆ ಪ್ರಕಾರ Internal Complaint Committee (ICC) ಯೆಂದು ಪುನರ್ ರಚಿಸಲು ಮತ್ತು ಆ ಕೋಶಕ್ಕೆ ಪ್ರಕರಣವನ್ನು ವಿಚಾರಣೆಗೆ ವಹಿಸಲು ಮತ್ತು (4) ಸಿ.ಸಿ.ಎ. ನಿಯಮಗಳ ಪ್ರಕಾರ ಒಬ್ಬ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ಅಥವಾ ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳಲ್ಲಿ ಒಬ್ಬರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಲು ಮತ್ತು ಒಬ್ಬ ಮಂಡನಾಧಿಕಾರಿಯಾಗಿ ನೇಮಕ ಮಾಡುವ ಕುರಿತು ಕ್ರಮದ ಸ್ಥಿರೀಕರಣಕ್ಕಾಗಿ, ಅನುಮೋದನೆಗೆ ಮತ್ತು ತೀರ್ಮಾನಕ್ಕಾಗಿ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ.

ಕುಲಸಚಿವರು ಪ್ರಕರಣದ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು, ಸದರಿ ಪ್ರಾಧ್ಯಾಪಕರನ್ನು ಅಮಾನತ್ತುಗೊಳಿಸುವ ಅಧಿಕಾರ ವ್ಯಾಪ್ತಿ ಮತ್ತು ಕಾರಣ ಕೇಳಿ ಸೂಚನಾ ಪತ್ರದಲ್ಲಿ ನೀಡಿದ ಅವಧಿ ಪೂರ್ಣಗೊಳ್ಳುವ ಮೊದಲೇ ಅಮಾನತ್ತು ಮಾಡಿರುವ ಕುರಿತು ಆಕ್ಷೇಪ ವ್ಯಕ್ತಪಡಿಸಿದರು. ಈ ಕುರಿತು ಕುಲಸಚಿವರು, ಕರ್ನಾಟಕ ರಾಜ್ಯ (ವರ್ಗೀಕರಣ; ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957 ರಲ್ಲಿಯ ನಿಯಮ 10(1). (d) ಪ್ರಕಾರ, ಸರ್ಕಾರಿ ನೌಕರನ ವಿರುದ್ಧ "Where there is prima facie evidence of gross dereliction of duty…" ಸಂದರ್ಭದಲ್ಲಿ ಸಿಬ್ಬಂದಿಯನ್ನು ಅಮಾನತ್ತುಗೊಳಿಸಲು ಅವಕಾಶ ಇದೆ, ಎಂಬ ನಿಯಮವನ್ನು ಸಭೆಗೆ ತಿಳಿಸಿದರು. ಸದರಿ ನಿಯಮದಂತೆ, ಅಮಾನತ್ತು ಮಾಡಲು ಯಾವುದೇ ನೋಟೀಸು ನೀಡುವ ಅಗತ್ಯವಿಲ್ಲ. ನೋಟೀಸು ನೀಡುವುದು ವಿಚಾರಣೆಗೆ ಸಂಬಂಧಿಸಿದ ವಿಷಯವಾಗಿದ್ದು, ಅಮಾನತ್ತುಗೊಳಿಸುವುದು ನಿಯಮದ ಪ್ರಕಾರ 6 ತಿಂಗಳ ವರೆಗೆ ಅಧಿಕಾರದಿಂದ ದೂರವಿಡುವ ತಕ್ಷಣದ ಕ್ರಮ ಎಂದು ತಿಳಿಸಿದರು.

ಮುಂದುವರೆದು, ಮಾನ್ಯ ಕುಲಪತಿಗಳ ಆದೇಶದಂತೆ ಸದರಿ ವಿಷಯವನ್ನು ವಿಶ್ವವಿದ್ಯಾನಿಲಯದಲ್ಲಿ ಅಸ್ತಿತ್ವದಲ್ಲಿರುವ Women Grievance Cell ಗೆ ವರ್ಗಾಯಿಸಿ ವಿಚಾರಣೆ ನಡೆಸುವಂತೆ, ಸೂಚನೆ ನೀಡಲಾಗಿದ್ದು, ಸಮಿತಿಯ ಅಧ್ಯಕ್ಷರು ಈಗಿರುವ ಸಮಿತಿಯಲ್ಲಿ ಒಬ್ಬ ಸದ್ಯರು ಆಪಾದಿತ ಪ್ರಾಧ್ಯಾಪಕರಿಗೆ ಸಂಬಂಧಿಯಾಗಿದ್ದು, ಇನ್ನೊಬ್ಬ ಸದಸ್ಯರು ವಿಶ್ವವಿದ್ಯಾನಿಲಯದ ಸೇವೆಯಲ್ಲಿ ಇಲ್ಲ ಎಂದು ತಿಳಿಸಿ, ಯುಜಿಸಿ ನಿಯಮಗಳ ಪ್ರಕಾರ Internal Complaints Committee ರಚಿಸಬೇಕಾದ ಅಗತ್ಯವಿದೆ, ಅದಲ್ಲಿ ಒಬ್ಬರು ಮಹಿಳಾ ವಕೀಲರು ಮತ್ತು

ಒಬ್ಬರು ಮಹಿಳೆಯರಿಗೆ ಸಂಬಂಧಿಸಿದ NGO ಗಳಿಂದ ನಾಮನಿರ್ದೇಶನ ಮಾಡಿ ಸಮಿತಿ ರಚಿಸಬೇಕೆಂದು ಕುಲಸಚಿವರನ್ನು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕುಲಪತಿಗಳು ವಿವರಿಸುತ್ತಾ ಸದರಿ ಪ್ರಾಧ್ಯಾಪಕರನ್ನು ಅಮಾನತ್ತಿನಲ್ಲಿ ಇಟ್ಟು ವಿಚಾರಣೆ ಜರುಗಿಸಲು ಅನುಮೋದನೆ ಕೋರಿ ಕುಲಸಚಿವರು ಮಂಡಿಸಿದ ಕಡತವನ್ನು ಪರಿಶೀಲಿಸಿ, ವಿಷಯದ ಸೂಕ್ಷ್ಮತೆ, ಗಾಂಭಿರ್ಯತೆ ಮತ್ತು ತುರ್ತು ಸನ್ನಿವೇಶವನ್ನು ಗಮನಿಸಿ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಅನುಚ್ಛೇದ 15(5) ರಲ್ಲಿ "ತ್ವರಿತವೆಂದು ಅಭಿಪ್ರಾಯ ಪಡುವ ಯಾವುದೇ ಸಂದರ್ಭದಲ್ಲಿ ಅವಶ್ಯವೆಂದು ಭಾವಿಸುವ ಕೂಡಲೇ ಕ್ರಮ ಕೈಕೊಳ್ಳಲು" ಇರುವ ಕುಲಪತಿಗಳ ಅಧಿಕಾರದ ಅನ್ವಯ ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು.

ಸದಸ್ಯರು ಪ್ರಾಧ್ಯಾಪಕರನ್ನು ಅಮಾನತ್ತು ಮಾಡಿರುವುದು ಅತ್ಯಂತ ಕಠಿಣ ಕ್ರಮವಾಗಿದೆ. ಪ್ರಾಧ್ಯಾಪಕರನ್ನು ಅವಶ್ಯಕವಾದ ಅಧ್ಯಾಪನದ ಜವಾಬ್ದಾರಿಗೆ ಸೀಮಿತಗೊಳಿಸಿ, ಯಾವುದೇ ಆಡಳಿತಾತ್ಮಕ ಜವಾಬ್ದಾರಿಯಿಂದ ದೂರವಿರಿಸಿ ಅಧ್ಯಾಪನದ ಜವಾಬ್ದಾರಿಯನ್ನು ಮಾತ್ರ ನಿರ್ವಹಿಸಲು ಅವಕಾಶ ಕಲ್ಪಿಸಬೇಕೆಂದು ಮತ್ತು ವಿಚಾರಣೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕೆಂದು ಒತ್ತಾಯಿಸಿದರು.

ಸುದೀರ್ಘ ಚರ್ಚೆಯ ನಂತರ ಬಹುಮತದ ಆಧಾರದ ಮೇಲೆ ಸಭೆ ಕೆಳಗಿನಂತೆ ತೀರ್ಮಾನಿಸಿತು:

**<u>ನಿರ್ಣಯ:</u>**

1. **ಪ್ರಸ್ತಾವನೆಯನ್ನು ಸ್ಥಿರೀಕರಿಸಲಾಯಿತು, ಸದರಿ ಪ್ರಾಧ್ಯಾಪಕರಿಗೆ ವಿಚಾರಣೆ ಪೂರ್ಣಗೊಳ್ಳುವವರೆಗೆ ಯಾವುದೇ ಆಡಳಿತಾತ್ಮಕ ಜವಾಬ್ದಾರಿಗಳಾದ, ವಿಭಾಗದ ಮುಖ್ಯಸ್ಥರ ಹುದ್ದೆ, ನಿಕಾಯದ ಡೀನರು, ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ ಅಧ್ಯಕ್ಷತೆ / ವಿದ್ಯಾವಿಷಯಕ ಪರಿಷತ್ / ಆಡಳಿತ ಮಂಡಳಿಗಳ ಸದಸ್ಯತ್ವ ಮುಂತಾದ ಜವಾಬ್ದಾರಿಗಳನ್ನು ನೀಡಬಾರದೆಂದು ಹಾಗೂ ಯಾವುದೇ ಸಂದರ್ಭದಲ್ಲಿ ಸಾಕ್ಷಿಗಳ ಮೇಲೆ ಪ್ರಭಾವ ಬೀರುವುದು ಅಥವಾ ದಾಖಲೆಗಳ ತಿರುಚುವಿಕೆಗೆ ಪ್ರಯತ್ನಿಸಬಾರದು ಎಂಬ ಷರತ್ತುಗಳಿಗೆ ಒಳಪಟ್ಟು, ಅಮಾನತ್ತನ್ನು ಹಿಂಪಡೆಯಲು ಸಭೆ ತೀರ್ಮಾನಿಸಿತು.**
2. **ಯು.ಜಿ.ಸಿ ನಿಯಮಗಳ ಪ್ರಕಾರ Internal Complaint Committee (ICC) ರಚಿಸಿ, ಸದರಿ ಪ್ರಕರಣದ ವಿಚಾರಣೆಯನ್ನು ಪುನರ್ ರಚಿಸುವ ICC ಗೆ ವಹಿಸಲು, ಮತ್ತು ಕರ್ನಾಟಕ ನಾಗರೀಕ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮ 1957 ರ ಪ್ರಕಾರ ವಿಚಾರಣೆ ನಡೆಸಲು ಒಬ್ಬ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಲು ಹಾಗೂ ದೋಷಾರೋಪಣೆ ಪಟ್ಟಿಗೆ ಅನುಮೋದನೆ ನೀಡಲು ಕುಲತಿಗಳಿಗೆ ಅಧಿಕಾರ ನೀಡಿ ಸಭೆ ತೀರ್ಮಾನಿಸಿತು.**

ಸದಸ್ಯರಾದ ಶ್ರೀ.ಟಿ.ಹೆಚ್. ಶ್ರೀನಿವಾಸಯ್ಯ ರವರು ಈ ತೀರ್ಮಾನಕ್ಕೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು.

**ವಿಷಯ ಸಂಖ್ಯೆ: 17 :** **ಬೆಂಗಳೂರು ನಗರ ವಿಶ್ವವಿದ್ಯಾಲನಿಲಯದ ವ್ಯಾಪ್ತಿಯ ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ (ಸ್ವಾಯತ್ತ) ಮಹಿಳಾ ಕಾಲೇಜು ಎಂ.ಎಸ್.ಸಿ(ಸಸ್ಯಶಾಸ್ತ್ರ)ಹೊಸ ಕೋರ್ಸನ್ನು ಪ್ರಾರಂಭಿಸುವ ಕುರಿತು ರಚಿಸಲಾದ ಸಮಿತಿಯ ವರದಿಯನ್ನು ಪರಿಗಣಿಸುವ ಬಗ್ಗೆ.**

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾಲನಿಲಯದ ವ್ಯಾಪ್ತಿಯ ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ (ಸ್ವಾಯತ್ತ) ಮಹಿಳಾ ಕಾಲೇಜು 2021–22 ನೇ ಶೈಕ್ಷಣಿಕ ಸಾಲಿನಿಂದ ಎಂ.ಎಸ್.ಸಿ (ಸಸ್ಯಶಾಸ್ತ್ರ) ಹೊಸ ಕೋರ್ಸನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯ ಅನುಮತಿಯನ್ನು ಕೋರಿರುತ್ತಾರೆ. ಡಾ:ವಿ.ಆರ್. ದೇವರಾಜ್, ಡೀನರು, ವಿಜ್ಞಾನ

ನಿಕಾಯ ಇವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಕುಲಸಚಿವರು(ಮೌಲ್ಯಮಾಪನ) ಹಾಗೂ ಪ್ರೋ:ಎಲ್. ರಾಜಣ್ಣ, ಸಸ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಸದಸ್ಯರನ್ನೊಳಗೊಂಡು ರಚಿಸಲಾದ ಸಮಿತಿಯು ದಿನಾಂಕ 24.09.2021 ರಂದು ಸದರಿ ಕಾಲೇಜಿಗೆ ಭೇಟಿ ನೀಡಿ ಕೆಳಕಂಡ ಶಿಫಾರಸ್ಸುಗಳೊಂದಿಗೆ ವರದಿ ಸಲ್ಲಿಸಿರುತ್ತಾರೆ.

Approval for starting the new PG Course in Botany be granted by the University subject to the following conditions:

1. Maximum intake will be 15 students
2. College must establish a separate Sr.M.Sc laboratory
3. Procure books relevant to curriculum of the PG Course
4. Appoint a competent laboratory assistant.

ಸಮಿತಿ ವರದಿಯ ಶಿಫಾರಸ್ಸುಗಳ ಪ್ರಕಾರ 2021-22 ನೇ ಶೈಕ್ಷಣಿಕ ಸಾಲಿನಿಂದ ಎಂ.ಎಸ್.ಸಿ (ಸಸ್ಯಶಾಸ್ತ್ರ) ಹೊಸ ಕೋರ್ಸ್‌ನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿದೆ.

**<u>ನಿರ್ಣಯ:</u>**

ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ: 18 : ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸೇರಿರುವ ಕಟ್ಟಡಗಳಲ್ಲಿ ಕಾರ್ಯನಿರತ ವಿವಿಧ ಸಂಸ್ಥೆ/ಕಾರ್ಯಾಲಯಗಳನ್ನು ಖಾಲಿ ಮಾಡುವ ಬಗ್ಗೆ.**

*ಪರಾಮರ್ಶಕ ಟಿಪ್ಪಣಿ:*

Bengaluru City University has been established by an Act of Karnataka Legislature and the same has been notified vide Karnataka Gazette Notification No.34/2015 dtd. 13.08.2015 by Trifurcating Bangalore University into Three Universities namely Bengaluru University/Bengaluru Central University and Bengaluru North University. The Head quarters of Bengaluru Central University is located in Central College Campus of Bengaluru City University.

As per Government Order No. ED 192 UBV dated 06.12.2017 the Building and Assets of Central College Campus have been transferred to the Bengaluru Central University by the Bengaluru University. Thereafter the tenants comes under the said developments.

1. SC.No.1692/2019 Bengaluru Central University Vs. Forum of Former Vice Chancellor's – Oral lease agreement on a nominal Rent of Rs.1,000/- per year.

2. SC.No.1693/2019 – Bengaluru Central University Vs. Kannada University - Oral lease agreement on a nominal Rent of Rs. 1,000/- per year. Notice issued dtd. 18.6.2019 directed to vacate and hand over vacant possession of the schedule premises within the 30 days from the receipt of the notice.

3. SC.No.1689/2019 – Bengaluru Central University V/s All India Council for Technical Education – reg Lease agreement dated 08.03.1999 on a nominal rent Rs. 1000/- per Year for a period of 30 years

4. SC.No.1694/2019 – Bengaluru Central University V/s. Central College Old Boys

Association- The cause of action for the suit arose on 18.06.2019 when the plaintiff issued notice to vacate and handover the vacant possession of the suit schedule and subsequently, when the time granted in the terminating notice expired.

5. O.S.No.25943/2019 – Central College old Boys Association V/s Registrar ,Bengaluru Central University - reg.Plaint it is crystal clear that the defendant made requests and demands to vacate and handover the vacant possession of the suit property by issuing letter and legal notice. However, at no point of time Defendant tried to take possession of the schedule property

ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಹೊಂದಿಕೊಂಡಿರುವ ವಿವಿಧ ಜಾಗಗಳಲ್ಲಿ, ಬೆಂಗಳೂರು ನಗರ ವಿಶ್ವವಿದ್ಯಾಲಯ ಹೊರತಾದ ಸುಮಾರು 8 ಸಂಸ್ಥೆಗಳು ವಿವಿಧ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ. ಬೆಂಗಳೂರು ನಗರ ವಿಶ್ವವಿದ್ಯಾಲಯ ಪೂರ್ಣ ಪ್ರಮಾಣದಲ್ಲಿ ಕೆಲಸ ಪ್ರಾರಂಭಿಸಿರುವುದರಿಂದ ಸ್ಥಳಾವಕಾಶದ ಅಭಾವ ಕಾರಣದಿಂದ, ಸದರಿ ಸಂಸ್ಥೆಗಳಿಗೆ ಸಂಬಂಧಪಟ್ಟ ಕೊಠಡಿ/ಕಟ್ಟಡಗಳನ್ನು ತೆರವು ಗೊಳಿಸಲು ಕೋರಿರಬಹುದು. ಆದರೂ ಸದರಿ ಕೊಠಡಿ/ಕಟ್ಟಡಗಳು ತೆರವಾಗದ ಹಿನ್ನೆಲೆಯಲ್ಲಿ ಈ ಹಿಂದೆ ನ್ಯಾಯಾಲಯದಲ್ಲಿ ದೂರು ದಾಖಲಿಸಲಾಗಿರುತ್ತದೆ. ಈ ದೂರುಗಳ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಗಳಿಗೆ ನೋಟೀಸ್ ನೀಡಲಾಗಿರುತ್ತದೆ.

ದಿನಾಂಕ 03.11.2020 ರಲ್ಲಿ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು ಮತ್ತು ಸಾಹಿತ್ಯ ಅಕಾಡೆಮಿ, ನವದೆಹಲಿ, ಈ ಎರಡು ಸಂಸ್ಥೆಗಳು, ಈ ಹಿಂದಿನ ಕುಲಪತಿಗಳಿಗೆ ಪತ್ರ ಬರೆದು ಕಟ್ಟಡ ತೆರವುಗೊಳಿಸುವ ಸಂಬಂಧ ದಾಖಲಾಗಿರುವ ದೂರುಗಳನ್ನು ವಿಶ್ವವಿದ್ಯಾಲಯದಿಂದ ಹಿಂಪಡೆಯಲು ಕೋರಿರುತ್ತಾರೆ.

ಈ ಪತ್ರಗಳ ಆಧಾರದ ಮೇಲೆ ಕುಲಪತಿಗಳು ದಿನಾಂಕ 18.01.2021 ರಲ್ಲಿ ಸದರಿ ಸಂಸ್ಥೆಗಳೊಂದಿಗೆ ಚರ್ಚಿಸಲಾಗಿತ್ತು, ತದನಂತರ, ಲಘು ವ್ಯಾಜ್ಯ ವ್ಯಾವಹಾರಿಕ ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ದಾವೆಗೆ, ಸಂಬಂಧಪಟ್ಟ ದಾಖಲೆಗಳು ದೊರಕದೇಯಿರುವುದರಿಂದ ಹಿಂಪಡೆಯಲು ಕೋರಬಹುದಾಗಿದೆ.

Thereby, the suit or any Proceeding before the Small Causes Court is not permissible, only to take action under the Provisions of the Public Premises (Eviction of unauthorized Occupants) Act, 1971

Any, University established comes under the Preview of Government thereby, Unauthorized Occupants of the statutory authority in relation to Public Premises comes under the Provision of the Public Premises (Eviction) of Unauthorized Occupants) Act,1971.

ಮುಂದುವರಿದು, the Provision of the Public Premises (Eviction) of Unauthorized Occupants) Act, 1971 ನ ಪ್ರಕಾರ ಹೊಸದಾಗಿ ಮುಂದುವರಿಸಲು,ಸಿಂಡಿಕೇಟ್ ಸಭೆಯ ಮುಂದೆ ಪರಿಗಣನೆಗೆ ಮಂಡಿಸಲಾಗಿದೆ.

**ನಿರ್ಣಯ:**

**ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು.**

ಕುಲಸಚಿವರ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
**ಕುಲಸಚಿವರು**
**ಸದಸ್ಯ ಕಾರ್ಯದರ್ಶಿಗಳು**

ಸಹಿ/-
**ಕುಲಪತಿಗಳು**
**ಸಭಾಧ್ಯಕ್ಷರು**

**ಕುಲಸಚಿವರು**
**ಬೆಂಗಳೂರು ನಗರ ವಿಶ್ವವಿದ್ಯಾನಿಲಯ**